೩೮೫

ಮಕ್ಕಳಲ್ಲಿ ಪ್ರಚಲಿತವಾದ ಮೂಢನಂಬಿಕೆಗಳು

ಶ್ರೀ ಎಲ್. ಆರ್. ಹೆಗಡೆ

ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ

ಜನವರಿ, ೧೯೮೯

ಉಪನ್ಯಾಸ ಗ್ರಂಥಮಾಲೆ

೩೮೫

ಮಕ್ಕಳಲ್ಲಿ ಪ್ರಚಲಿತವಾದ ಮೂಢನಂಬಿಕೆಗಳು

ಶ್ರೀ ಎಲ್. ಆರ್. ಹೆಗಡೆ

ಪ್ರಸಾರಾಂಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
ಜನೆವರಿ, ೧೯೮೯

ಈ ಜ್ಞಾನಪ್ರಸಾರ ಕಾರ್ಯದಲ್ಲಿ ಭಾಗವಹಿಸುವದರಿಂದ ವಿಶ್ವವಿದ್ಯಾಲಯದ ಹಾಗೂ ಕಾಲೇಜುಗಳ ಅಧ್ಯಾಪಕರಿಗೆ ಆಯಾ ಪ್ರದೇಶದ ಜನತೆಯೊಡನೆ ಹೆಚ್ಚಿನ ಸಂಪರ್ಕ ಒದಗುವದಲ್ಲದೆ ಎಂತಹ ವಿಷಯವನ್ನಾದರೂ ಕನ್ನಡದಲ್ಲಿ ತಿಳಿಸಿ ಹೇಳುವ ಹಾಗೂ ಅದನ್ನು ಸುಲಭ ಶೈಲಿಯಲ್ಲಿ ಬರವಣಿಗೆಯಲ್ಲಿಳಿಸುವ ಅವಕಾಶ ದೊರೆಯುತ್ತದೆ. ಈ ಕಾರ್ಯದಲ್ಲಿ ಅವರೆಲ್ಲರೂ ಮನಮುಟ್ಟಿ ಸಹಕರಿಸುತ್ತಿರುವುದು ಶ್ಲಾಘನೀಯ.

ಈ ಮಾಲೆಯಲ್ಲಿ ಈಗಾಗಲೇ ೩೮೪ ಪುಸ್ತಿಕೆಗಳು ಪ್ರಕಟವಾಗಿವೆ. ಅವು ಅಚ್ಚಾಗಿ ಹೊರ ಬಂದೊಡನೆ ಅವುಗಳ ಸಾವಿರಾರು ಪ್ರತಿಗಳನ್ನು ಜನರು ಕೊಂಡು ಓದುತ್ತಾರೆ. ಅನೇಕ ಪುಸ್ತಿಕೆಗಳು ನಾಲ್ಕು ಐದು ಮುದ್ರಣಗಳನ್ನು ಕಂಡಿರುವುದು ಈ ಮಾಲೆಯ ಉಪಯುಕ್ತತೆಯನ್ನೂ ಜನಪ್ರಿಯತೆಯನ್ನೂ ವ್ಯಕ್ತಗೊಳಿಸುತ್ತದೆ. ಇದು ನಾಡಿನ ಪ್ರಗತಿಯ ಚಿಹ್ನೆಯೆಂದು ಭಾವಿಸುತ್ತೇನೆ.

ವಿಶ್ವವಿದ್ಯಾಲಯದ ಈ ಸೇವೆಯ ಸಂಪೂರ್ಣ ಪ್ರಯೋಜನ ಪಡೆದು ಸಾಮಾನ್ಯ ಜನತೆ ನಾಡಿನ ಸರ್ವತೋಮುಖ ಪ್ರಗತಿಯಲ್ಲಿ ಪಾಲುಗೊಳ್ಳಲೆಂದು ಹಾರೈಸುತ್ತೇನೆ.

ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ

ಜಿ. ಕೆ. ನಾರಾಯಣ ರೆಡ್ಡಿ
ಕುಲಪತಿಗಳು

ಅರಿಕೆ

ಕರ್ನಾಟಕ ವಿಶ್ವವಿದ್ಯಾಲಯದ ಪ್ರಸಾರಾಂಗದ ವ್ಯಾಸಂಗ ವಿಸ್ತರಣ ಉಪನ್ಯಾಸಮಾಲೆಯ ಶಿಬಿರದ ಅಂಗವಾಗಿ ಧಾರವಾಡ ಜಿಲ್ಹೆಯ ಸಂಶಿ ಗ್ರಾಮದಲ್ಲಿ ನಾನುಮಾಡಿದ ಉಪನ್ಯಾಸವು ಈಗ ಪುಸ್ತಿಕೆಯ ರೂಪದಲ್ಲಿ ಪ್ರಕಟವಾಗುತ್ತಿದೆ.

ಶ್ರೀ ಚೆನ್ನವೀರ ಕಣವಿಯವರು ಪ್ರಸಾರಾಂಗದ ನಿರ್ದೇಶಕರಾಗಿದ್ದಾಗ 'ಮಕ್ಕಳಲ್ಲಿ ಮೂಢನಂಬಿಕೆಗಳ ಬೆಳವಣಿಗೆ" ಎಂಬ ವಿಷಯದ ಲೇಖನವನ್ನು ನನ್ನಿಂದ ಬರೆಯಿಸಿ, ಅವರು ಕ. ವಿ. ವಿ. ಪ್ರಸಾರಾಂಗದ 'ಮಾನವಿಕ ಭಾರತಿ' ತ್ರೈಮಾಸಿಕದಲ್ಲಿ ಅದನ್ನು ಮೊಟ್ಟಮೊದಲು ಪ್ರಕಟಿಸಿದರು. ಈ ವಿಷಯದ ಮೇಲೆ ಉಪನ್ಯಾಸ ಮಾಡಲು ಆಮಂತ್ರಣವಿತ್ತು, ಸಂಶಿಯಲ್ಲಿ ನಡೆದ ಕ.ವಿ.ವಿ. ವ್ಯಾ. ವಿ. ಶಿಬಿರದಲ್ಲಿ ನನ್ನಿಂದ ಈ ಕುರಿತು ಉಪನ್ಯಾಸ ಮಾಡಿಸಿದರು. ಅವರ ಅಪೇಕ್ಷೆಯ ಮೇರೆಗೆ ಉಪನ್ಯಾಸ ಮಾಲೆಯ ಪುಸ್ತಿಕೆಯ ಅಗತ್ಯಕ್ಕೆ ತಕ್ಕಂತೆ ಸ್ವಲ್ಪ ಮಾರ್ಪಾಟುಗಳೊಡನೆ ಈ ವಿಷಯವನ್ನು ಪುನಃ ಬರೆದೆನು.

ಭೂತ, ಪಿಶಾಚಿ, ದೆವ್ವ ಮುಂತಾದ ಸಾಮಾನ್ಯವಾಗಿ ಅದೃಶ್ಯವಾದ, ಆದರೆ, ಸಂದರ್ಭಗಳಲ್ಲಿ ತಮ್ಮ ಅಸ್ತಿತ್ವವನ್ನು ಪ್ರಕಟಪಡಿಸುವ ಜೀವಿಗಳು ಇರುವವೆಂದು ಜಗತ್ತಿನಲ್ಲಿ ಎಲ್ಲ ಕಡೆಗೂ ಮಾನವರು ನಂಬುತ್ತಲೇ ಬಂದಿರುತ್ತಾರೆ. ಈ ಕುರಿತು ಸ್ವಾಮೀ ವಿವೇಕಾನಂದರಂಥ ತತ್ತ್ವಜ್ಞಾನಿಗಳೂ ನಂಬಿಗೆಯನ್ನಿರಿಸಿ ಕೊಂಡಿರುವುದು ತಿಳಿದುಬರುತ್ತದೆ. ಬೇರೆ ಗ್ರಹಗಳಲ್ಲಿಯೂ ನಕ್ಷತ್ರಗಳಲ್ಲಿ ಸಹ ಪೃಥ್ವಿಯಲ್ಲಿ ಜೀವಿಗಳಿರುವಂತೆಯೇ ಆದರೆ

೧. ತಪ್ಪು ತಿಳಿವಳಿಕೆಯ ಹಿನ್ನೆಲೆ

ಕಾರ್ಯಕಾರಣ ಸಂಬಂಧವು ಪ್ರತಿಯೊಂದು ವಸ್ತುವಿಗೂ ಘಟನೆಗೂ ಇದ್ದೇ ಇರುತ್ತದೆ. ಈ ಕುರಿತು ತೀರ ಪ್ರಾಚೀನ ಕಾಲದಿಂದಲೂ ವನಸ್ಪತಿಗಳೂ ಪ್ರಾಣಿಗಳೂ ಮನುಷ್ಯರೂ ಪ್ರತಿ ಕ್ರಿಯೆಯನ್ನು ತೋರಿಸುತ್ತ ಬಂದಿರುವುದು ಗೋಚರಿಸುತ್ತದೆ. ಈ ಸಂಬಂಧ ಮತ್ತು ಅದರ ಪ್ರತಿಕ್ರಿಯೆ ವನಸ್ಪತಿಗಳಲ್ಲಿಯೂ ಚೇತನಾಚೇತನವುಳ್ಳ ಸಮಸ್ತ ವಿಶ್ವದಲ್ಲೂ ವ್ಯಾಪಿಸಿಕೊಂಡಿದೆ. ಆದರೆ, ಜೀವಿಗಳು ಈ ಸಂಬಂಧವನ್ನು ಕುರಿತು ಪಡುವ ಭಾವನೆಗಳೂ, ವಿಚಾರಗಳೂ (ಪ್ರಾಣಿ ವನಸ್ಪತಿಗಳಲ್ಲಿ ಭಾವನೆ, ವಿಚಾರ ಪ್ರತಿಕ್ರಿಯೆಗಳಲ್ಲಿ ವ್ಯತ್ಯಾಸ ಹುಡುಕುವುದು ಕಷ್ಟ) ಪ್ರತಿಕ್ರಿಯೆಗಳೂ ಸಮಂಜಸ, ಅಸಮಂಜಸ ಎರಡೂ ಸ್ತರಗಳಲ್ಲಿ ಕಾಣಬರುತ್ತವೆ.

ತೆಂಗಿನ ಮಡಲು ಮರದಿಂದ ಬಿದ್ದು ದೊಡ್ಡ ಶಬ್ದವಾಗುವುದು ಸಹಜ. ಆದರೆ, ಸಾಕಿದ ಒಂದು ನಾಯಿ ಆ ಮಡಲ ಹೆಡೆ ಬಿದ್ದ ಕೂಡಲೆ ಕೂಗುತ್ತ ಓಡಿ ಹೋಗಿ ಅದನ್ನು ಕಚ್ಚಿ ಕಚ್ಚಿ ಎಳೆದಾಡುತ್ತಿತ್ತು. ಆ ಮಡಲ ಹೆಡೆ ಯಾವುದೋ ಪ್ರಾಣಿಯೆಂದೇ ಆ ನಾಯಿ ತರ್ಕಿಸಿ ತನ್ನ ಉಗ್ರ ರೋಷದ ಪ್ರತಿಕ್ರಿಯೆಯನ್ನು ಪ್ರತಿಸಲವೂ ತೋರುತ್ತಿತ್ತು. ಮಡಲ ಹೆಡೆ ಒಂದು ಜೀವಂತ ಪ್ರಾಣಿಯಲ್ಲ ಎಂದು ಕೊನೆಯವರೆಗೂ ಅದು ತಿಳಿಯಲಾರದೆ ಹೋಯಿತು. ಆದರೆ, ಅದೇ ನಾಯಿ ಒಂದು ದೊಡ್ಡ ಹೆಗ್ಗಣ ಮುಂದೆ ಬಂದು ಕೂದಲು ನಿಮಿರಿಸಿಕೊಂಡು

ಮಾಡಿ, ಆ ಕೆರೆಯಲ್ಲಿ ಆಹುತಿ ತೆಗೆದುಕೊಳ್ಳುತ್ತದೆ ಎಂಬ ಪ್ರತೀತಿ ಅದರಿಂದ ಹುಟ್ಟಿಕೊಂಡು ಆ ಕೆರೆ ಭೀತಿಯ ಆಗರವಾಗುತ್ತದೆ.

ಇದಕ್ಕೆ ಹಿನ್ನೆಲೆಯಾಗಿ ಯಾರಾದರೂ ಆ ಕೆರೆಯಲ್ಲಿ ಆತ್ಮ ಹತ್ಯೆ ಮಾಡಿಕೊಂಡಿದ್ದರಂತೂ ಆ ದೆವ್ವಕ್ಕೆ ಅವರ ಹೆಸರೂ ಅಂಟಿ ಕೊಳ್ಳಬಹುದು.

ದೊಡ್ಡವರು ಪಡೆದ ಅನುಭವಗಳು ಎಂಬ ರೀತಿಯಲ್ಲಿ ಹಲವಾರು ತರದ ಭೂತ–ಪಿಶಾಚ, ದೆವ್ವ, ಮುಂತಾದವುಗಳ ಕುರಿತಾದ ಕಥೆಗಳನ್ನು ಮಕ್ಕಳು ಕೇಳಿಕೊಂಡೇ ಬೆಳೆಯುತ್ತವೆ. (ಇಂಥ ಅನೇಕ ಕಥೆಗಳನ್ನು ಧಾರವಾಡ ಆಕಾಶವಾಣಿಯ ಪ್ರಸಾರ ಭಾಷಣದಲ್ಲಿ ಪ್ರಸ್ತಾಪ ಮಾಡಿರುತ್ತೇನೆ).

ನಾನು ಈ ಲೇಖನವನ್ನು ನನ್ನ ಮಿತ್ರ ಪ್ರೊ. ಬಿ. ಎಸ್. ಶಾನಭಾಗರಿಗೆ (ಈಗ ದಿವಂಗತರು) ಓದಿ ಹೇಳುವಾಗ, ಶ್ರೀ ಎಂ. ಬಿ. (ಅಪ್ಪು) ಶಾನಭಾಗರು ಬಂದು ಓದುವುದನ್ನು ಆಸ್ಥೆ ಯಿಂದ ಕೇಳಿದರು. ತಮ್ಮ ಅನುಭವವನ್ನು ಹೇಳಿದರು.

ಅವರ ಕುಟುಂಬದ ಒಬ್ಬ ಮುದುಕಿ ನಿಪುತ್ರಿಕರಾಗಿ ತೀರಿ ದರು. ಅವರು ಒಬ್ಬ ಚಿಕ್ಕ ಹುಡುಗಿಯನ್ನು ದಿನಾ ಕೈಹಿಡಿದು ದೇವಾಲಯಕ್ಕೆ ಕರೆದುಕೊಂಡು ಹೋಗುವ ಅಭ್ಯಾಸವಿತ್ತು, ಅವರು ಮರಣ ಹೊಂದಲು ರಾತ್ರಿಯಲ್ಲಿಯೇ ಅವರ ಶವವನ್ನು ದಹನಮಾಡಿದರು.

ಮರುದಿನ ಆ ಹುಡುಗಿ ಅಜ್ಜಿಯನ್ನು ಹುಡುಕಿದಳು. ಹಾಸಿಗೆಯಲ್ಲಿ ಅವರು ಕಾಣಲಿಲ್ಲ, ಎಲ್ಲಿ ಹೋದರೆಂದು ಕೇಳಿ ದರು. ಮೇಲೆ ಹೋದರೆಂದು ಅವಳಿಗೆ ತಿಳಿಸಲಾಯಿತು.

ಅವರು ಮಡಿದ ಕೋಣೆಯಲ್ಲಿ ಗಿಳಿಗೂಟಕ್ಕೆ ಅರಿವೆಯ ರಡು ದಾರಗಳನ್ನು ನೆಲದವರೆಗೆ ತೂಗ ಬಿಟ್ಟು, ನೆಲದ ಽೀಲೆ ತಟ್ಟೆಯಲ್ಲಿ ಹಾಲನ್ನೂ ಇನ್ನೊಂದರಲ್ಲಿ ನೀರನ್ನೂ ಇಟ್ಟು ಾಥೇಯುವನ್ನು ರಚಿಸಿದ್ದರು. ನೋಡಿದ ಆ ಹುಡುಗಿ ಇದೇ ಾರದ ಮೇಲೆ ಆವರು ಮೇಲೆ ಹೋದರೆಂದು ತಿಳಿದಳು. ಟ್ಟೆಗಳು ಯಾಕೆ? ಎಂದು ಕೇಳಿದಳು. "ಅವರು ರಾತ್ರಿ ಬಂದು ುಡಿಯುವ ಸಲುವಾಗಿ ಇಟ್ಟೆವು" ಎಂದರು.

ಹುಡುಗಿ ಹೌದೆಂದು ನಂಬಿದಳು. ಬೆಳಗಾದ ಮೇಲೆ ಹೋಗಿ ಜ್ಜಿ ಬಂದು ತಟ್ಟೆಯನ್ನು ಬರಿದು ಮಾಡಿ ಹೋದಳೋ ಂದು ಕುತೂಹಲದಿಂದ ನೋಡಿದಳು. ಹಾಲಿನ ತಟ್ಟೆ ಮಾತ್ರ ರಿದಾಗಿತ್ತು. ಹುಡುಗಿ ಅಜ್ಜಿ ಇಂದು ರಾತ್ರಿಯೂ ಬಂದು ಾಲನ್ನು ಕುಡಿವಳೋ ನೋಡಬೇಕು ಎಂದಳು. ಶ್ರೀ ಶಾನ ಾಗರು ಆವಳು ಹೆದರಿಯಾಳೆಂದು ರಾತ್ರಿ ಬೆಕ್ಕು ಬಂದು ಹಾಲನ್ನು ುಡಿದಿದ್ದು, ಅಜ್ಜಿಯಲ್ಲ ಎಂದು ನಿಜಸಂಗತಿ ತಿಳಿಸಿದರು.

ಈ ಅನುಭವಗಳೊಡನೆ, ತೀರ ಚಿಕ್ಕಮಕ್ಕಳಿಗೂ ಕಥೆ ಹೇಳಿ, ವುಗಳು ಅಳದಂತೆ ರಂಬಿಸಿ, ಲಹರಿಯಲ್ಲಿರಿಸುವುದಕ್ಕಾಗಿ ಅನೇಕ ನಪದ ಕಥೆಗಳನ್ನು ರುಚಿಕಟ್ಟಾದ ಇತರ ಸಂಗತಿಗಳನ್ನು ಅಜ್ಜಿ ುರೂ, ತಾಯಂದಿರೂ ಇತರ ಹಿರಿಯರೂ ಹೇಳುತ್ತಾರೆ. ಅವು ಳಲ್ಲಿ ರಾಕ್ಷಸರ ಕಥೆಗಳಿರಬಹುದು; ಕ್ರೂರ ಪ್ರಾಣಿಗಳ ಕಥೆಗಳಿರ ಹುದು; ಮುದ್ದು ಮಾಟಗಳ ಪರಿಣಾಮದ ಕಥೆಗಳಿರಬಹುದು; ೂತ, ಪಿಶಾಚಿ, ದೆವ್ವಗಳ ಕಥೆಗಳಿರಬಹುದು. ಇವನ್ನು ಕೇಳುವಾಗ ುಡುಗರು ನಲಿದರೂ ಭೀತಿಯು ಸ್ವರದೊಡನೆ ಈ ಕಥೆಗಳಲ್ಲಿನ ಾಕ್ಷಸ, ಭೂತ-ಪಿಶಾಚಾದಿಗಳ ಸಂಗತಿಗಳೂ ಕೂಡಿಕೊಂಡು ಂಥ ನಂಬಿಗೆಗಳು ಬಲವಾಗಲು ಕಾರಣವಾಗಬಹುದು.

ನಾವು ಚಿಕ್ಕವರಾಗಿದ್ದಾಗ, ಹಿರಿಯರು ಸುಣ್ಣಾ ಕೊಡು; ಸುಣ್ಣಾ ಕೊಡು ಎಂದು ಕೇಳುವ ಮಮ್ಮಲತಿ (ಒಂದೇ ಮೊಲೆಯುಳ್ಳ ದೆವ್ವತಿ) ಕುರಿತು ಹೇಳಿ ರಾತ್ರಿಯಲ್ಲಿ ಹಾಗೆ ಎಂದಾದರೂ ಕೇಳಿದರೆ ಹಿಂದಿರುಗಿ ನೋಡಬಾರದು ಎಂದು ಎಚ್ಚರಿಕೆ ಕೊಟ್ಟಿದ್ದರು. ಅಕಸ್ಮಾತ್ ಹಿಂದಿರುಗಿ ನೋಡಿದ್ದರೆ ಅದು ತನ್ನ ದೊಡ್ಡ ಮೊಲೆಯನ್ನು ನೋಡಿದವರ ತಲೆಯ ಮೇಲೆ ಇಟ್ಟು ಬಿಡುತ್ತಿತ್ತಂತೆ. ಹೆದರಿದ ಬಡಪಾಯಿ ಸತ್ತ ಲೆಕ್ಕವೇ.

ನಾವು ಚಿಕ್ಕ ಹುಡುಗರು ವೀಳ್ಯದ ಸಾಮಾನು ತಕ್ಕೊಂಡು ಹೋಗುತ್ತಿರಲಿಲ್ಲ. ಆದರೆ ಆ ಹೆಣ್ಣು ದೆವ್ವವು ವೀಳ್ಯ (ಸಂಚಿ) ಸಮೇತ ತಿರುಗುತ್ತಿದ್ದ ದೊಡ್ಡವರನ್ನು ಕೇಳುತ್ತಿದ್ದಳಂತೆ. ಆಗ ಎಲೆಗೆ ಸುಣ್ಣ ಹಚ್ಚಿ ಅವಳಿಗೆ ಕೊಡಲು ಬಗ್ಗಿ ತೆಗೆಯುವಾಗ ಅವಳು ಹೀಗೆ ಗದಾಪ್ರಹಾರ ಮಾಡುತ್ತಿದ್ದಳಂತೆ. ಬದುಕಿದ್ದಾಗ ಹಾದರಗಿರತ್ತಿಯಾಗಿದ್ದ ಹೆಂಗಸಿನ ಒಂದು ಮೊಲೆಯನ್ನು ಗಂಡನು ಕತ್ತರಿಸಿದಾಗ ಸತ್ತು ದೆವ್ವವಾದವಳೆಂದು ಪ್ರತೀತಿಯಿರುವಂತಿದೆ. ದಕ್ಷಿಣ ಕನ್ನಡದಲ್ಲಿ ಉಮ್ಮಲತಿ ಎಂಬ ದೈವದ ಉಲ್ಲೇಖವಿರುತ್ತಿದ್ದು ಅದೇ ಈ ದೆವ್ವವೋ ಎಂಬುದು ವಿಚಾರಣೀಯವಾಗಿದೆ. ಮಮ್ಮಲತಿಯನ್ನು ಎದುರುಹಾಕಿಕೊಂಡಿದ್ದ ಗಂಡಸರು ಈಗ ಯಾರೂ ಇಲ್ಲ. ಆದರೂ ಈಕೆಯ ಕುರಿತ ವದಂತಿ ಇನ್ನೂ ಇದೆ.

ನಮ್ಮ ಹೊಲನಗದ್ದೆ ಊರಿನಲ್ಲೂ ಬೇರೆಡೆ ಸಹ ಸಪ್ಪರತಿ ಎಂಬ ದೆವ್ವದ ಕಟ್ಟೆ ಇರುವುದು. ಅದನ್ನು ದಾಟಿ ಹೋಗುವಾಗ ಹಿರಿಯರ ಹೇಳಿಕೆಯಂತೆ ನಾವು ಗಿಡದ ಸೊಪ್ಪನ್ನು

ತರಿದು ಆ ಕಟ್ಟೆಯ ಕಡೆಗೆ ಒಗೆದು ಹೋಗುತ್ತಿದ್ದೆವು. ಅಲ್ಲಿ ವಾಸವಾಗಿದ್ದ ಆ ಹೆಣ್ಣು ದೆವ್ವಕ್ಕೆ ಹೀಗೆ ಸೊಪ್ಪನ್ನು ತರಿದು ಒಗೆಯಬೇಕಾದ ಸಂದರ್ಭದ ಹಿನ್ನೆಲೆ ನಮ್ಮ ಹಿರಿಯರಿಗೂ ಗೊತ್ತಿರಲಿಲ್ಲ. ಅವರು ತಮ್ಮ ಹಿರಿಯರಿಂದ ಕೇಳಿದ ಸಂಗತಿ, ನಡೆಸಿದ ಪದ್ಧತಿ ಇದನ್ನು ಮುಂದುವರಿಸಿದ್ದರು.

ಗಿಡಮರಗಳ ಸೊಪ್ಪಿನ ಉಡುಗೆಯೇ ರೂಢವಾಗಿದ್ದ ಕಾಲವಿತ್ತು. ಅದಕ್ಕೂ ಹಿಂದೆ ಬೆತ್ತಲೆಯಾಗಿರುತ್ತಿದ್ದ ಕಾಲವೂ ಇತ್ತು. ಹೆಣ್ಣು ದೇವತೆಗೆ ಸೊಪ್ಪಿನ ಉಡಿಗೆಯ ಹರಕೆ ಸಲ್ಲಿಸುವುದು ಈಗಲೂ ಉಂಟು.

ಅಡವಿಯಲ್ಲಿ ಯಾರೋ ಒಬ್ಬ ಹೆಂಗಸನ್ನು ದುಷ್ಟನು ಬೆತ್ತಲೆಯಾಗಿ ಮಾಡಿ, ಅವಳ ಮಾನಭಂಗ ಮಾಡಿದ ಪರಿಣಾಮವಾಗಿ ಅವಳು ಸತ್ತು ದೆವ್ವವಾಗಿ, ಸೊಪ್ಪಿನ ಉಡುಗೆಯನ್ನು ದಾರಿಹೋಕರ ಹತ್ತಿರ ಬೇಡುವಳೆಂಬ ನಂಬಿಗೆಯಿಂದ ಈ ಆಚರಣೆ ರೂಢವಾಗಿದ್ದಿತು.

ಕೆಲವು ವರ್ಷಗಳ ಹಿಂದೆ ಕುಮಟಾದ ದೊಡ್ಡ ಜವಳಿ ಅಂಗಡಿಯಲ್ಲಿ ಬೀಗ ಹಾಕಿ ಇಟ್ಟರೂ ಬೀಗ ಹಾಕಿದಂತೆಯೇ ಇದ್ದು, ಒಳಗೆ ಬಹು ಮೌಲ್ಯವಾದ ಪಟ್ಟೆ ಸೀರೆಗಳಿದ್ದುದು ಕಾಣದಂತಾಗುತ್ತಿದ್ದವಂತೆ. ಈ ಘಟನೆ ಅನೇಕ ದಿನ ನಡೆದು, ಆದ ನಷ್ಟದಿಂದ ನೊಂದ ಅಂಗಡಿಕಾರರಿಗೆ ಇದು ಏನೋ ಚೌಡಿಯ ತಂಟೆಯೆಂದು ಅನಿಸಿತು. ಹೊಗೇರಿಯ ಪ್ರಸಿದ್ಧ ಮಾಂತ್ರಿಕರಾಗಿದ್ದ ದಿ. ಪದ್ಮನಾಭ ಅಡಿಗರನ್ನು ಕರೆಸಿ, ವಿದ್ಯುಕ್ತವಾದ ಶಾಂತಿ ಮಾಡಿಸಲು ಸಾವಿರಾರು ರೂಪಾಯಿ ಖರ್ಚು ಮಾಡಿ

ವರು. ಆಮೇಲೆ ಈ ತರದ ನಷ್ಟ ನಿಂತಿತು ಎಂಬ ವರ್ತಮಾನ ದೃಢವಾಯಿತು.

ಇಂಥ ಘಟನೆಗಳಲ್ಲಿ ನಷ್ಟವಾದದ್ದು ನಿಜ; ಶಾಂತಿ ಮಾಡಿಸಿದ್ದು ನಿಜ; ಮುಂದೆ ಉಪಟಳ ನಿಂತಿದ್ದು ನಿಜ. ಆದರೆ, ಇಷ್ಟರಿಂದಲೇ ಇದು ದೆವ್ವದ ಕಾಟವೇ: ಇಲ್ಲವೆ. ಅಂಥವೇ ಕೀಲಿಕೈ ದೊರಕಿಸಿದ್ದ ಕಳ್ಳರ ಹೂಟವಲ್ಲ ಎಂದು ಹೇಳಬಹುದೇ ? ವಿಚಾರಮಾಡತಕ್ಕ ವಿಷಯ.

ಹೆಗಡೆ ಊರಿನ ತಣ್ಣೀರಕುಳಿ ಎಂಬ ಭಾಗದಲ್ಲಿ ಇರುವ ಒಂದು ಹಾಲಕ್ಕಿ ಒಕ್ಕಲಿಗರ ಕುಟುಂಬದಲ್ಲಿ ಮಕ್ಕಳೂ ದೊಡ್ಡವರೂ ಸೇರಿ ಹತ್ತು ಹನ್ನೆರಡು ಜನರಿದ್ದಾರೆ. ಒಂದು ಮಾನಿಗೆ (ಸುಮಾರು ಅರ್ಧ ಬಂಗಾಲಿ ಮಣ) ಅಕ್ಕಿ ಎಂಟೇ ದಿನಗಳಲ್ಲಿ ಉಂಡು ಖರ್ಚಾಗುತ್ತದೆ. ಇದು ದೆವ್ವದ ಕಾಟ (ಆ ಮನೆಯವರೆಲ್ಲರ ಹೊಟ್ಟೆಯಲ್ಲಿ ಭೂತ ಹೊಕ್ಕು ಹೆಚ್ಚು ಉಣ್ಣುವ ಹಾಗೆ ಮಾಡುತ್ತದೆ ಎಂದು ಇದರ ಅರ್ಥ) ಎಂದು ಅಲ್ಲಿಯ ಯಜಮಾನಿ ಹೆಂಗಸು ಭಟ್ಟರ ಹತ್ತಿರ ಬಂದು ಹೇಳಿ, ನೋಟ (ದೆವ್ವವನ್ನು ಕಾಣುವ ಕ್ರಿಯೆ) ನೋಡಿಸಿಕೊಂಡು ಹೋಗಿ, ಅವರು ಕೊಟ್ಟ ತೀರ್ಥವನ್ನು ಎಲ್ಲರ ಮೈಮೇಲೂ ಪ್ರೋಕ್ಷಿಸಿ ಹೊಟ್ಟೆ (ದೆವ್ವದ) ಕಾಟಕ್ಕೆ ಚಿಕಿತ್ಸೆ ಮಾಡಲು ಹವಣಿಸಿದ್ದಳು.

೩. ದೃಷ್ಟಿ ಭೂತದ ಸಟ್ಟಿ

ಹುಟ್ಟಿದ ಶಿಶುವಿಗೆ ಹನ್ನೊಂದು ದಿನಗಳಾದ ಮೇಲೆ ಗಿನೇ ನದ ಸಂದರ್ಭದಲ್ಲಿ ಬಾಣಂತಿಯನ್ನು ಮೀಯಿಸಿ ಒಳಗೆ ತಕ್ಕೊಳ್ಳು, ರಷ್ಟೇ ? ಆ ದಿನದಿಂದ ಶಿಶುವಿಗೆ ದೃಷ್ಟಿಬಾಗ ಬಾರದೆಂದು ಮೀಯಿಸಿದ ಶಿಶುವಿಗೆ ದೃಷ್ಟಿ ತೆಗೆಯುವ ಸಂಸ್ಕಾರ ನಡೆಸುತ್ತಾರೆ. ನ್ನುವ ವೀಳ್ಯದ ಎಲೆಗೆ ಮೂರು ರಂಧ್ರ ಮಾಡುತ್ತಾರೆ, ಇದು ದೃಷ್ಟಿಭೂತದ ಕಣ್ಣು,ಮೂಗು, ಬಾಯಿ ಆಗಿರಬೇಕು. ಅದಕ್ಕೆ ಎಣ್ಣೆ ಹಚ್ಚುತ್ತಾರೆ. ಇದು ಆ ಹಸಿ ಎಲೆ, ಬೆಂಕಿಗೆ ಹಾಕಿದಾಗ ಉರಿಯಲು ಸಹಾಯಕವಾಗುತ್ತದೆ. ಉಪ್ಪು ಮತ್ತು ಮೆಣಸಿನ ಮೂರು ಕರೆ ಳನ್ನೂ ಆ ಎಲೆಯನ್ನೂ ಶಿಶುವಿನ ತಲೆಯ ಸುತ್ತಲು ತಿರುಗಿಸಿ ಸುಳಿದು)ಒಲೆಯ ಬೆಂಕಿಯಲ್ಲಿ ಹಾಕುತ್ತಾರೆ. ಆಗ ಉಪ್ಪು, ಎಲೆ, ಮೆಣಸಿನ ಕರೆ ಸುಡುವಾಗ ಚಟಚಟ ಶಬ್ದವಾಗುತ್ತದೆ. ದೃಷ್ಟಿ ದ್ದದ್ದೇ ಹೌದಾದರೆ. ಉಪ್ಪು ಚಟಚಟ ಶಬ್ದ ಮಾಡುವುದಿಲ್ಲ. ಸಟ್ಟ ಎಲೆಯ ವಾಸನೆಯೂ ಬರುವುದಿಲ್ಲ ಎಂದು ಸೂಲಗಿತ್ತಿ ರಮೇಶ್ವರಿ ದೃಢವಾಗಿ ನಂಬಿದ್ದಾಳೆ.

ಈ ದೃಷ್ಟಿ ಬೀಳಲು ಕಾರಣವೆಂದರೆ, ಹಡೆದ ಹೆಂಗಸನ್ನೂ ಹಡೆದ ಶಿಶುವನ್ನೂ ನೋಡಲು ಬರುವ ಹೆಂಗಸರಲ್ಲಿ ಕೆಲವರು ಹುಡುಗ ಚೆಂದವಾಗಿದೆ. ಪುಟಿಪುಟಿ (ಪುಷ್ಟಿ) ಆದೆ" ಅಂತ ಹೇಳಿ ದೃಷ್ಟಿಹಾಕುವುದು. ಇದರ ಪರಿಣಾಮವಾಗಿ. ಶಿಶು ಬಹಳ ಅಳುತ್ತದೆ. ನಿದ್ದೆ ಮಾಡದು. ಆದರೆ. ಇದರಲ್ಲಿ ವಿಶೇಷವೇನಂದರೆ. ಬಾಣಂತಿ–ಶಿಶು ಮೈಲಿಗೆಯಲ್ಲಿರುವಾಗ ಅವರನ್ನು ಆ ದೃಷ್ಟಿ ಸೋಂಕುವುದಿಲ್ಲ. ಅದಕ್ಕೂ ಮಡಿ–ಮೈಲಿಗೆ ಎಂಬುದಿರಬೇಕು.

ಫಲ ಬಿಡದ ಮರಗಳಿಗೆ ದೃಷ್ಟಿಭೂತದ ಕಾಟವಿದ್ದಿರ ಬೇಕು. ಗ್ರಹಣದಲ್ಲಿ ಅವುಗಳಿಗೆ ಒನಕೆಯಿಂದ ಹೊಡೆದರೆ ಫಲ ಬರುವುದಂತೆ. ಒನಕೆಯ ಪೆಟ್ಟಿಗೆ ದೆವ್ವ–ಭೂತಗಳೂ ಹೆದರುತ್ತವೆ.

೫. ಪರಂಪರೆಯ ನಂಬಿಕೆಗಳು, ಆಚರಣೆಗಳು

ಬೆಳಿಗ್ಗೆ ಕಾಗೆ ಕರ್‌ಕರ್ ಎಂದು ಬೆಳಕು ಹರಿವುದನ್ನು ಸೂಚಿಸಿದ ಕೂಡಲೆ ಗರತಿ ಎದ್ದು ಮುಂದಿನ ಬಾಗಿಲನ್ನು ತೆರೆಯಬೇಕು. ಇದು ಯಾವ ಶಾಸ್ತ್ರ? ಎಂದು ಕೇಳಿದರೆ ಆಗ ಭಾಗ್ಯಲಕ್ಷ್ಮಿ ಮನೆಯ ಒಳಗೆ ಬರುವ ಸಮಯ: ಬಾಗಿಲನ್ನು ತೆಗೆಯದಿದ್ದರೆ ಅವಳು ಬಾರದೇ ಹೊರಟುಹೋಗಿ ಬಿಡುತ್ತಾಳೆ ಎಂದು ವಿವರಣೆ ಬರುತ್ತದೆ. ಹಿಂದಿನ ಬಾಗಿಲನ್ನು ಆಗ ತೆಗೆಯಕೂಡದು, ಬಂದ ಭಾಗ್ಯಲಕ್ಷ್ಮಿ ಆಗಿಂದಾಗ ಹಿಂದಿನ ಬಾಗಿಲಿನಿಂದ ಹೊರಟುಹೋದಳು.

ಸಂಜೆ ಉರಿ ಹೋಗಿ ಸಿರಿ ಬರುವ ಸಮಯ. ಆಗ ಮುಂದಿನ ಬಾಗಿಲನ್ನು ತೆರೆದು ದೀಪಹಚ್ಚಿ ಗೃಹಲಕ್ಷ್ಮಿಯು ನಮಸ್ಕಾರ ಮಾಡಿ ಆ ಸಂಧ್ಯಾಲಕ್ಷ್ಮಿಯನ್ನು ಎದುರುಗೊಂಡು ಸ್ವಾಗತಿಸಬೇಕು.

ಇನ್ನೊಬ್ಬ ಲಕ್ಷ್ಮಿಯ ಜಾಗ ಹೊಸ್ತಿಲು. ಹೊಸ್ತಿಲ ಲಕ್ಷ್ಮಿಗೆ ರಾತ್ರಿಗೆ ಮಲಗುವ ಮುನ್ನ ಪ್ರತಿಯೊಬ್ಬ ಗೃಹಿಣಿಯೂ ನೀರನ್ನಿಡಬೇಕು. ಮಧ್ಯರಾತ್ರಿ ನೀರಡಿಕೆಯಾದರೆ ಅವಳಿಗೆ ಕುಡಿಯಲು ಇಡುವ ನೀರು ಅದು. ನೀರನ್ನಿಡಲು ತಪ್ಪಿದರೆ ಆ ಲಕ್ಷ್ಮಿ ಸಿಟ್ಟುಗೊಂಡು ಮನೆಯನ್ನೇ ಬಿಟ್ಟು ಹೋಗುವಳಂತೆ.

ನನ್ನ ಗೃಹಲಕ್ಷ್ಮಿಗೆ ಈ ಹೊಸ್ತಿಲ ಲಕ್ಷ್ಮಿಗೆ ನೀರನ್ನಿಡುವ ರಿತು ಬಹಳ ಮುತುವರ್ಜಿಯಿತ್ತು. ದುರ್ದೈವವಶಾತ್ ಆಕೆ ಧ್ಯವಯಸ್ಸಿನಲ್ಲಿಯೇ ಕಾಲವಶಳಾದಳು. ನನ್ನ ಹಿರಿ ಹುಡುಗಿಗೆ ಮೇಲಿನಂತೆ ವಿವರಣೆ ಕೊಟ್ಟರೂ ಇವರಲ್ಲಿ ಸಂದೇಹ ಬಂತು, ಆ ನೀರು ಬೆಳಗ್ಗೆ ಸಹ ಇದ್ದಷ್ಟೇ ಇರುತ್ತದೆ. ಆಗ ನಾನು ಹೇಳಿದೆನು !!

ರಾತ್ರಿ ನೀರಡಿಸಿದ ಜಿರಲೆಗಳು ಬಂದು ಆ ತಂಬಿಗೆಯಲ್ಲಿ ಇಳಿ. ನೀರಿನಲ್ಲಿ ಬಿದ್ದು ಪರದಾಡುವ ಶಬ್ದ ಕೇಳುತ್ತಿರುತ್ತದೆ. ದ್ದರಿಂದ ಆ ಹೊಸ್ತಿಲ ಲಕ್ಷ್ಮಿ ಜಿರಲೆಯ ರೂಪದಿಂದ ಬಂದು ನ ನೀರನ್ನು ಕುಡಿಯುತ್ತದೆ ಎಂದು ನಾವು ವಿನೋದ ಮಾಡಿ ವು ತಂಬಿಗೆಯನ್ನು ಮುಚ್ಚದೆ ಇಟ್ಟಿದ್ದರಿಂದ ಜಿರಲೆಗಳು ಬಿದ್ದು ಾಡುತ್ತವೆ.

೬. ಮುಗ್ಧಮಕ್ಕಳನ್ನು ಸಂಬಾಳಿಸಲು ಬಿತ್ತುವ ಮೂಢ ನಂಬಿಕೆಗಳು

ಹಲವು ವೇಳೆ ಹಿರಿಯರು ತಮ್ಮ ಅನುಕೂಲತೆಗಾಗಿಯೋ ಅಥವಾ ಮಕ್ಕಳ ನಡತೆಯನ್ನು ತಿದ್ದಲೋಸುಗವೋ ಮಕ್ಕಳಿಗೆ ಕೊಡುವ ಉಪದೇಶ ಇಲ್ಲವೆ, ಎಚ್ಚರಿಕೆಗಳೂ, ಉದಾಹರಣೆಗಳೂ ಮೂಢನಂಬಿಕೆಗಳನ್ನು ಬೆಳೆಯಿಸಲು ಕಾರಣಗಳಾಗುತ್ತವೆ.

ಶಿಶುಗಳಿಗೆ ಹಾಲನ್ನು ಕುಡಿಸಲು ತಾಯಂದಿರು ವಿಶೇಷ ಪ್ರಯತ್ನ ಮಾಡಬೇಕಾಗುತ್ತದೆ. ರುದ್ರಭಟ್ಟನ "ಜಗನ್ನಾಥ ವಿಜಯ"ದಲ್ಲಿ ಹಾಲನ್ನು ಕುಡಿಯದಿದ್ದ ಬಾಲಕೃಷ್ಣನಿಗೆ, ಯಶೋದೆ, "ಮಗೂ, ಹಾಲನ್ನು ಕುಡಿ, ನಿನ್ನ ಜಂಡಿಕೆ ಬೇಗ ಉದ್ದವಾಗುತ್ತದೆ" ಎಂದು ಪುಸಲಾಯಿಸಿದಳು. ಆ ತುಂಟ ಮಗು ಹಾಲನ್ನು ಕುಡಿದು, "ಅಬ್ಬೇ, ಈಗ ನನ್ನ ಜಂಡಿಕೆ ಎಷ್ಟು ಉದ್ದವಾಗಿದೆ?" ಎಂದು ಸವಾಲು ಹಾಕಿದನು. ಮುಗ್ಧ ಮಗು ಜಂಡಿಕೆ ಉದ್ದವಾಗಿರಬೇಕು ಎಂದು ತಿಳಿದು ಹೀಗೆ ಕೇಳಿರಬೇಕು ಎಂದು ತಿಳಿವಂತಿತ್ತು.

ಚಹ ಕುಡಿವುದು ಒಳ್ಳೆಯದಲ್ಲ ಎಂದು ಮಗುವಿಗೆ ಹೇಳುತ್ತಲೇ ಹಿರಿಯರು ಚಹ ಕುಡಿಯುತ್ತಾರೆ. ಚಹ ಕುಡಿದರೆ ಮೈಬಣ್ಣ ಕರಿದಾಗುತ್ತದೆ ಎಂದು ಮಗುವಿಗೆ ಹೇಳುತ್ತಾರೆ. ಮಗು ಇದು ಸುಳ್ಳೇ ಎಂದರೆ, "ನೋಡು, ನಿನ್ನ ಅಜ್ಜ ಸಣ್ಣ

ವಸಿರುವಾಗ ಬೆಳ್ಳಗಿದ್ದ. ಚಹ ಕುಡಿದು ಕುಡಿದು ಅವನ ಮೈ ಬಣ್ಣ ಹೇಗೆ ಕಪ್ಪಾಗಿದೆ" ಎನ್ನುವುದುಂಟು. ಕೆಲವು ಚಿಕ್ಕಮಕ್ಕಳು ಇದನ್ನು ನಂಬಬಹುದು. ಆದರೆ, ನಮ್ಮ ನಾಲ್ಕು ವರ್ಷ ವಯಸ್ಸಿನ ಮೊಮ್ಮಗಳು ನಂಬದೆ, ಅಜ್ಜ ಚಹ ಕುಡಿದರೂ ಬೆಳ್ಳಗೆ ಇದ್ದಾನೆ" ಎಂದು ಉತ್ತರಿಸಿದಳು.

ಮಳೆ ಬಿದ್ದ ಹೊಸದರಲ್ಲಿ ಮಕ್ಕಳಿಗೆ ಬಲು ಹಿಗ್ಗು. ಅಂಗಳದಲ್ಲಿ ಹರಿವ ನೀರಿನಲ್ಲಿ ಕಾಲನ್ನಿಟ್ಟು ನೀರಿನಲ್ಲೇ ಕಾಲನ್ನೆಳೆದು ಕೊಂಡು, ನೀರು ತೂರಿ ಚೆಲ್ಲವರಿವ ಶಬ್ದವನ್ನೂ ರೀತಿಯನ್ನೂ ಕೇಳಿ ನೋಡಿ ಅವರಿಗೆ ತುಂಬಾ ಖುಷಿ. ನೀರಿನಲ್ಲಿ ಆಟವಾಡ ಬಾರದು, ಥಂಡಿಯಾಗುತ್ತದೆ ಅಂದರೆ ಅವರು ಕೇಳರು. "ನೋಡು. ಮಳೆಯಲ್ಲಿ ಆಟವಾಡಲು ಹೋಗಬೇಡ, ಮಣ್ಣು ಕರಡಿ ಬರುತ್ತದೆ" ಎಂದು ಹೆದರಿಕೆ ಹಾಕುತ್ತಿದ್ದರು. ನಾವು ಚಿಕ್ಕವರಿದ್ದಾಗ ಹಾಗೆಂದು ನಂಬಿ ಆಟವಾಡಲು ಅಂಗಳಕ್ಕೆ ಹೋಗಲು ಹಿಂಜರಿದುದುಂಟು. ಮಣ್ಣು ಕರಡಿ ಅಂದರೆ, ಕರಡಿಯಲ್ಲ ಮಣ್ಣು ನೀರಲ್ಲಿ ಕದಡಿ ಬರುತ್ತದೆ ಎಂದು ತಿಳಿಯುತ್ತಿರಲಿಲ್ಲ.

ಮಕ್ಕಳಿಗೆ ತಿಂಡಿ ತಿನ್ನುವ ಆಸೆ ಹೆಚ್ಚಾಗಿಯೇ ಇರುತ್ತದೆ. ತಿಂಡಿಯನ್ನು ಕೊಟ್ಟಾಗ, ಬೇರೆ ಮಕ್ಕಳಿಗೆ ತೋರಿಸಿ, ನೋಡೋ ನಾನು ತಿನ್ನುತ್ತೇನೆ, ನಿನಗೆ ಕೊಡುವುದಿಲ್ಲ" ಎನ್ನಲು ಮುಷ್ಟಿಯನ್ನು ಮುಚ್ಚಿ ಮುಂದೆ ಮಡಚುತ್ತಾ, "ತೊಮ್ಮ" (ನಿನಗೆ ಇಲ್ಲ, ಸೊನ್ನೆ) ಎಂದು ಛೇಡಿಸುತ್ತಾರೆ. ಮಕ್ಕಳಿಗೆ ಸಹಜವಾದರೂ ಇದು ಅಪೇಕ್ಷಣೀಯವಾದ ಗುಣವಲ್ಲ.

ಇದನ್ನು ತಿದ್ದಲು, "ಹೀಗೆ ತಕ್ಕಿಸಿ (ಬೇರೆಯವರಿಗೆ ತೋರಿಸಿ ಕೊಡದೆ) ತಿಂದರೆ ಕಣ್ಣು (ರೆಪ್ಪೆಗೆ) ಚವುಕಲು ಏಳುತ್ತದೆ" ಎನ್ನುತ್ತಾರೆ. ಚವುಕಲು ಅಂದರೆ. ರೆಪ್ಪೆಗುರು.

ಸಂಜೆ ದೀಪ ಹಚ್ಚಿದ ಸಂದರ್ಭದಲ್ಲಿ ಚಿಕ್ಕಮಕ್ಕಳು ಬಾಯಿ ಪಾಠ ಹೇಳಬೇಕು. ಮಗ್ಗಿ ಕಲಿಯಬೇಕು. ಆಗ ಆಡಲು ಹವಣಿಸುವುದು ತರವಲ್ಲ. ಆಗ ಹೆಣ್ಣುಮಕ್ಕಳಾಗಲಿ ಗಂಡು ಮಕ್ಕಳಾಗಲಿ ಕಲ್ಲು ಪರಳಿನ ಆಟ, ಕವಡೆ ಆಟ, ಗಜ್ಜುಗ ದಾಟ ಇತ್ಯಾದಿ ಆಟಗಳನ್ನು ಆಡಲು ಕುಳಿತರೆ, 'ದನಗಳ ಹಾಲು ಕಡಿಮೆಯಾಗುತ್ತದೆ. ಮೂರು ಸಂಜೆ ಹೊತ್ತಿನಲ್ಲಿ ಆಟ ಆಡಬೇಡಿ" ಎಂದು ಗದರಿಸುತ್ತಾರೆ. ಕೆಲವು ಹುಡುಗರು ಇದನ್ನು ನಂಬಬಹುದು.

ಚಿಕ್ಕಮಕ್ಕಳು ಕ್ರಿಮಿಕೀಟಗಳನ್ನೂ ಪ್ರಾಣಿಗಳನ್ನೂ ಪೀಡಿಸಿ ಮನರಂಜನೆ ಮಾಡಿಕೊಳ್ಳುವ ಪ್ರವೃತ್ತಿ ಒಳ್ಳೆಯದಲ್ಲ.

ಯಾರಾದರೂ ಪ್ರಾಣಿಯನ್ನು ಕೊಂದರೆ ಮುಂದಿನ ಜನ್ಮದಲ್ಲಿ ಅವನು(ಳು)ಅದೇ ಪ್ರಾಣಿಯಾಗಿ ಹುಟ್ಟಿ ಆ ಪ್ರಾಣಿ ಇಂಥ ಹುಡುಗ(ಗಿ) ಆಗಿ ಅವನ(ಳ)ನ್ನು ಕೊಲ್ಲುತ್ತದೆ ಎನ್ನುತ್ತಾರೆ. ದುಂಬಿಯ ರೆಕ್ಕೆ ಕೀಳುವುದು, ಅದರ ಬಾಲಕ್ಕೆ ದಾರಕಟ್ಟಿ ಅದು ಹಾರುವಾಗ ನೋಡಿ ಪೀಡಿಸಿ ಆನಂದ ಪಡುವುದು, ನೀರಿನಲ್ಲಿದ್ದ ಕಪ್ಪೆಗೆ ಕಲ್ಲು ಹೊಡೆಯುವುದು ತಪ್ಪಬೇಕೆಂದು ಹೀಗೆ ಹೇಳುತ್ತಾರೆ ಬೆಕ್ಕನ್ನು ಹೊಡೆದು ಕೊಂದರೆ ಕಾಶಿಗೆ ಹೋಗಿ, ಚಿನ್ನದ ಬೆಕ್ಕನ್ನು ಮಾಡಿಸಿಕೊಟ್ಟರೂ ಆ ಕೊಂದ ಪಾಪ ಹೋಗುವುದಿಲ್ಲ ಎಂದು ಸಾರುತ್ತಾರೆ.

ಮೂಕ ಪ್ರಾಣಿ ಗೋಡೆಗೆ ಕೈಯೆತ್ತಿ ಹೊಡೆಯ ಬಾರ ಾಯೆತ್ತಿ ಬಯ್ಯಬಾರ, ಬಯ್ದ ಬಯ್ಗಳು ಹೊಡೆದ ಹೊಡೆತ ಯಮನಿಗೆ ಹೋಗಿ ಮುಟ್ಟುತ್ತವೆ. ಎಂದು ಒಂದು ಜನಪದ ೀತದಲ್ಲಿದೆ. ಹಿರಿಯರನ್ನು, ತಾಯಿ, ಅಕ್ಕ ಮುಂತಾದವರನ್ನು ುಳಿದರೆ, ಕಾಲಿನಲ್ಲಿ ಹುಳ ಆಗುತ್ತವೆ; ತುಳಿಯಬಾರದು.

ಅಕ್ಕನ ತುಳಿದವನೇ, ಚೆಕ್ಕ ಸುಟ್ಟುಂಡ್ ತಿಂದವನೇ ಎಂದು ೀಯಾಳಿಸುತ್ತಾರೆ.

ಮಕ್ಕಳು ಒಮ್ಮೊಮ್ಮೆ ಹಿರಿಯರ ಒಂದೇ ಪಾದರಕ್ಷೆ ಾಕಿಕೊಂಡು ತಿರುಗುತ್ತಾರೆ, ಪಾದರಕ್ಷೆ ಕಳೆಯಲು ಇದೊಂದು ಾರಣವಾದೀತು. ಆಗ, ಒಂದೇ ಪಾದರಕ್ಷೆ ಹಾಕಿಕೊಂಡು ಳು ಹೆಜ್ಜೆ ನಡೆಯಬಾರದು, ಅನಿಷ್ಟ ಎಂದು ಹೇಳುತ್ತಾರೆ.

ತಿರುಗುವ ಹಾದಿಯಲ್ಲಿ ಮಲಗಿದರೆ ಹೆಬ್ಬಾವಾಗಿ ಹುಟ್ಟು ್ತಾರೆ, ಎನ್ನುತ್ತಾರೆ. ಹಾದಿಯಲ್ಲಿ ಯಾರಾದರೂ ಕತ್ತಲೆಯಲ್ಲಿ ುಟ್ಟಬಹುದೆಂಬುದು ನಿಜವಾದ ಕಾರಣ.

ಇಬ್ಬರು ಮಲಗುವಾಗ, ಒಬ್ಬರ ತಲೆ ಇನ್ನೊಬ್ಬರ ಾಲು ಹೊಂದಿಕೊಂಡು, ಅಂದರೆ, ವಿರುದ್ಧ ರೀತಿಯಲ್ಲಿ ಮಲಗ ಾರದು; ಹಾಗೆ ಮಲಗಿದರೆ ಎರಡೂ ಕಡೆ ತಲೆ ಇರುವಂತೆ ಾಣುವುದರಿಂದ 'ಎರಡು ಮಂಡೆ ಹಾವಾಗಿ ಹುಟ್ಟುತ್ತೀರಿ' ಂದು ಅದನ್ನು ನಿಷೇಧಿಸುತ್ತಾರೆ. ಹೀಗೆ ಮಲಗಿ ನಿದ್ರಿಸು ಾಗ ಕಾಲು ಕಣ್ಣು ಮೂಗಿಗೆ ತಾಗಬಹುದು ಎಂಬುದು ಷೇಧಕ್ಕೆ ನಿಜವಾದ ಉದ್ದೇಶ.

ಮೂರು ಸಂಜೆ ಹೊತ್ತಿನಲ್ಲಿ ಮಲಗಿದರೆ ಆಯುಷ್ಯ ಕ್ಷೀಣವಾಗುತ್ತದೆ ಎಂಬುದಕ್ಕೆ ಆ ಕಾಲದಲ್ಲಿ ಬಾಲಕರು ಮಗ್ಗಿ ಹೇಳಬೇಕು. ಬಾಯಿಪಾಠ ಒಪ್ಪಿಸಬೇಕು ಎಂಬ ಕಾರಣವುಂಟು.

ಒಡಕು ಬಳೆ ಧರಿಸಿದರೆ ಅಣ್ಣನಿಗೆ ಕಷ್ಟವಾಗುವುದೆಂಬಲ್ಲಿ ಆ ಬಳೆ ಪೂರ್ತಿ ಒಡೆದು ಕೈಗೆ ಗಾಯವುಂಟಾಗುವುದನ್ನು ತಪ್ಪಿಸುವ ಉದ್ದೇಶವಿದೆ. ಮಸಿ, ಇದ್ದಿಲು, ಖಡು ಇಲ್ಲವೆ ಸುಣ್ಣದಿಂದ ನೆಲ, ಇಲ್ಲವೆ, ಗೋಡೆಯ ಮೇಲೆ ಗೀಚಿದರೆ ಸಾಲವಾಗುತ್ತದೆ ಎನ್ನುತ್ತಾರೆ. ಗೀಚಿ ಹೊಲಸು ಮಾಡಬಾರ ದೆಂಬ ಉದ್ದೇಶ ಮೊದಲಿಗೆ ಇದ್ದರೂ ಹೀಗೆ ಹೇಳುವ ಹಿರಿ ಯರೂ ಈ ಮೂಢನಂಬಿಕೆಯನ್ನು ಹೊಂದಿರಬಹುದು.

ಯಾರಾದರೂ ಮನೆಗೆ ಬರುವ ಸಂದರ್ಭದಲ್ಲಿ ನೆಲದ ಕಸ ಗುಡಿಸಬಾರದು; ಕಸಬರಿಗೆ ಹಿಡಿದು ಅವರಿಗೆ ಎದುರಾಗ ಬಾರದು ಇದು ಅವಲಕ್ಷಣ ಎಂಬು ತಿಳಿವುದಲ್ಲದೆ, ಬಂದವರಿಗೆ ಅಪಶಕುನ, ಅವಮರ್ಯಾದೆ ಎಂದೂ ತಿಳಿಯುತ್ತಾರೆ.

ಒದ್ದೆಬಟ್ಟೆ ಹಾಕಿಕೊಂಡು ಪೂಜೆ ಮಾಡಬಾರದು. ಅದ ರಿಂದ ದಾರಿದ್ರ್ಯ ಬರುತ್ತದೆ ಎಂಬಲ್ಲಿ ಆರೋಗ್ಯ ದೃಷ್ಟಿ ಕಾರಣ ವಾಗಿದೆ.

ಮುಸ್ಸಂಜೆಯ ವೇಳೆಯಲ್ಲಿ ಹೆಣ್ಣುಮಕ್ಕಳ ಕೂದಲನ್ನು ಬಾಚಬಾರದು ಎಂಬುದರ ಕಾರಣ ಸ್ಪಷ್ಟವೇ ಇದೆ. ಹೆಣ್ಣು ಮಕ್ಕಳು ರಾತ್ರಿ ಕನ್ನಡಿಯನ್ನು ನೋಡಬಾರದು; ಎಂಬುದಕ್ಕೂ ಇಂಥ ಕಾರಣವಿದೆ.

ಹುಡುಗರು ಹೊಸ್ತಿಲಿನ ಮೇಲೆ ಕುಳಿತರೆ ತಿರುಗಾಡುವವರಿಗೆ ತೊಂದರೆಯಾಗುತ್ತದೆ. ಆದರಿಂದ ಅದನ್ನು ನಿಷೇಧಿಸಲು ಅದರಿಂದ ಸಾಲವಾಗುತ್ತದೆ ಎಂದು ಹುಡುಗರಿಗೆ ಹೇಳುತ್ತಾರೆ.

ಅಕ್ಕಿಯನ್ನು ಹೊರಗೆ ಚೆಲ್ಲಿದರೆ ಲಕ್ಷ್ಮಿದೇವಿ ಹೊರಗೆ ಹೊರಟು ಹೋಗುತ್ತಾಳೆ. ಮೂರುಸಂಜೆಯಲ್ಲಿ ಅವಾಚ್ಯ ಶಬ್ದವನ್ನು ಆಡಬಾರದು ಎಂದೂ ಹುಡುಗರಿಗೆ ಉಪದೇಶ ಮಾಡುತ್ತಾರೆ.

ಅರೆವ ಕಲ್ಲಿನಲ್ಲಿ ನೀರಿನ ಶೇಷವನ್ನಿಡಬಾರದು; ಹೀಗೆ ಇಟ್ಟರೆ, ಮನೆಯಲ್ಲಿ ಅಡಚಣೆ ಬರುತ್ತದೆ ಎಂದು ಹೇಳುತ್ತಾರೆ. ಕೆಲಸವನ್ನು ಸರಿಯಾಗಿ ಪೂರ್ತಿಮಾಡಬೇಕು ಎಂಬ ಉದ್ದೇಶವಿದ್ದರೂ ಕಾರಣ ಕೊಡುವುದು ಸರಿಯಾದುದಲ್ಲ.

ತುಟಿಗೆ ಸುಣ್ಣ ತಾಗಿದರೆ ಎದುರಿಗಿದ್ದವರೊಡನೆ ಜಗಳವಾಗುತ್ತದೆ ಎಂಬ ನಂಬಿಕೆ ಕಾಕತಾಲೀಯದಂತೆ ಕಾಣುತ್ತದೆ. ಆದರೆ ತುಟಿಗೆ ಸುಣ್ಣ ತಾಗಿದಾಗ ಸುಡುವ ಕಾರಣ ಆರೋಗ್ಯ ದೃಷ್ಟಿಯ ಹಿನ್ನೆಲೆಯಲ್ಲಿ ಈ ಕಂತೆಯ ಕಾರಣವನ್ನು ಕಟ್ಟ[illegible]ಬಹುದು.

೭. ಶಾಲೆಯ ಮಕ್ಕಳಲ್ಲಿ ಪ್ರಚಲಿತವಿರುವ ಮೂಢನಂಬಿಕೆಗಳು

ಶಾಲೆಗೆ ಹೋಗುವ ವಯಸ್ಸಿನ ಮಕ್ಕಳಲ್ಲಿ ಅನೇಕತರದ ಮೂಢನಂಬಿಕೆಗಳು ಪ್ರಚಾರದಲ್ಲಿವೆ. ಇವು ಹಬ್ಬುವುದೂ ಬಹಳ ಬೇಗ.

ಒಬ್ಬನ ತಲೆ ಆಕಸ್ಮಾತ್ ಇನ್ನೊಬ್ಬನ ತಲೆಗೆ ತಾಗಿದರೆ. ಇನ್ನೊಮ್ಮೆ ಪ್ರಯತ್ನಪೂರ್ವಕವಾಗಿ ತಲೆ ತಲೆ ತಾಗಿಸಿಕೊಳ್ಳಬೇಕು ಇಲ್ಲದೆ ಹೋದರೆ. ತಲೆಗೆ ಕೋಡು ಬರುತ್ತದೆ ಎಂದು ಒಬ್ಬ ಹುಡುಗ ಹೇಳಿದನು. ಇನ್ನೊಬ್ಬನು ಬಾವಿಯಲ್ಲಿ ಇಬ್ಬರೂ ಬಿದ್ದು ಸಾಯುವರೆಂದನು.

ಮೂತ್ರ ವಿಸರ್ಜನೆ ಕಾಲಕ್ಕೆ ಮೂತ್ರ ತಾಗಿದರೆ ಕಾಲನ್ನು ತುರಿಸಿಕೊಂಡು, ಸೂರ್ಯನನ್ನು ನೋಡಿದೆ ಎಂದರೆ ಕಾಲು ಶುದ್ಧವಾದ ಹಾಗೆ! ಸೂರ್ಯನ ಕಿರಣಗಳಿಗೆ ಶುದ್ಧೀಕರಣ ಶಕ್ತಿಯಿರುವುದರಿಂದ ಸೂರ್ಯನನ್ನು ನೋಡಿದೆ ಎಂದರೂ ಸಾಕು; ಕಾಲನ್ನು ತೊಳೆಯಬೇಕಿಲ್ಲ.

ಊಟಕ್ಕೆ ಕೂತಾಗ ಸೀನು ಬಂದರೆ, ಹುಟ್ಟೂರಿನ ಹೆಸರನ್ನು ನೆನಪುಮಾಡಿಕೊಳ್ಳಬೇಕು. ಅಂದರೆ ದೋಷ ಪರಿಹಾರ. ಬೇರೆಯವರ ತಲೆಯ ಮೇಲೆ ಹೊಡೆದರೆ ತಾಯಿ ಸತ್ತುಹೋಗುತ್ತಾಳೆ. ಅದನ್ನು ತಪ್ಪಿಸಲು ಹೊಡೆದವನು ಹೊಡೆಸಿಕೊಂಡವನ ತಲೆಗೆ “ಉಫ್ ಎಂದು ಊದಬೇಕು.

ಮಕ್ಕಳಿಗೆ ಹಲ್ಲು ಬೀಳುವುದು ಸಹಜ. ಆದರೆ, ಶರೀರದ ಒಂದು ಭಾಗ ನಷ್ಟವಾಯಿತೆಂದು ಮುಜಗರ. ಅದನ್ನು ಎಲ್ಲಿ ಒಗೆದರೆ ಪಿಶಾಚ ಹಿಡಿವುದೆಂದೋ ಇಲ್ಲವೆ ಯಾರಾದರೂ ಮಾಟ ಮಾಡಿ ಧಕ್ಕೆ ತರಬಹುದೆಂದೋ ಹಿಂದಿನವರು ಅದನ್ನು ತೆಂಗಿನ ಮರದ ರಂಧ್ರದಲ್ಲಿಡಬೇಕು ಎನ್ನುತ್ತಿದ್ದಿರಬೇಕು. ನಾವು ಚಿಕ್ಕವರಿದ್ದಾಗ ಹಿರಿಯರು ಹೀಗೆ ಹೇಳಿ, ಇದರಿಂದ ಮುತ್ತಿನಂಥ ಹಲ್ಲು ಹುಟ್ಟುತ್ತವೆ ಎನ್ನುತ್ತಿದ್ದರು. ಹಲ್ಲಿನೊಡನೆ ಕಲ್ಲು ಹರಳು ಸೇರಿಸಿ ಮಾಳಿಗೆಯ ಮೇಲೆ ಒಗೆದರೆ ಕಲ್ಲಿನಂಥ ಹಲ್ಲು ಬರುವುವೆಂದು ಬೈಲುಹೊಂಗಲ ಹಳ್ಳಿಯಲ್ಲಿ ನಂಬಿಕೆಯಿದೆ.

ಹಲ್ಲು ಬಿದ್ದರೆ ಹಂಚಿನ ಮನೆಯ ಮೇಲೆ ಒಗೆಯಬೇಕು; ನೆಲಕ್ಕೆ ಒಗೆಯಬಾರದು; ಹಲ್ಲು ಬೇಗ ಹುಟ್ಟುತ್ತದೆ.

ನಾವು ಹುಡುಗರಾಗಿದ್ದಾಗ (ಈಗಲೂ ಹುಡುಗರಲ್ಲಿ ಈ ಗೀಳು ಉಂಟು) ಕೈಬೆರಳುಗಳಲ್ಲಿ ತುದಿಗೆ ಎಷ್ಟು ಚಕ್ರ, ಎಷ್ಟು ಶಂಖ, ಕಮಲ, ಗದೆ ಮುಂತಾದವು ಉಂಟು ಎಂದು ನೋಡಿ ಕೊಳ್ಳುತ್ತಿದ್ದೆವು. ನಾಲ್ಕು ಬೆರಳುಗಳಲ್ಲಿಯೂ ಚಕ್ರವಿರುವುದು ಅಪೂರ್ವವಾದುದರಿಂದ ಅಂಥವನು ಚಕ್ರವರ್ತಿ (ಈಗಿನ ಲೆಕ್ಕ ದಲ್ಲಿ ಬಹಳ ಶ್ರೀಮಂತ) ಯಾಗುತ್ತಾನೆ ಎಂದು ಹಿರಿಯ ಹುಡುಗರು ಹೇಳುತ್ತಿದ್ದರು.

ಕೆಂಬೋತ ಕಂಡರೆ ಸಿಹಿಯೂಟ ಸಿಗುತ್ತದೆ ಎಂಬುದು ಕಾಕತಾಲೀಯ. ಗಂಡು ಮಕ್ಕಳಲ್ಲಿ ಅಂಗೈಮಡಚಿಕೊಂಡು ಕಿರಿಬೆರ ಳಿನ ಕೆಳಗಿನ ಮಡಿಕೆಗಳನ್ನು ಲೆಕ್ಕಮಾಡಿ, ಇಷ್ಟು ಹೆಂಡಂದಿರೂ ಮಕ್ಕಳೂ ಎಂದು ಭವಿಷ್ಯ ಹೇಳುವ ರೂಢಿಯುಂಟು.

ಗಂಡು ಮಕ್ಕಳಿಗಾಗಲಿ ಹೆಣ್ಣು ಮಕ್ಕಳಿಗಾಗಲಿ ಎರಡು ಹುಬ್ಬುಗಳು ಕೂಡಿದರೆ ಭಾಗ್ಯ ಎನ್ನಲು ಇದು ಕ್ವಚಿತವಾಗಿರುವುದೇ ಕಾರಣ.

ಹರಕು ಬಟ್ಟೆಯನ್ನು ಧರಿಸಬಾರದು. ಒಡಕು ಕನ್ನಡಿಯನ್ನು ನೋಡಬಾರದು; ನೋಡಿದರೆ ದಾರಿದ್ರ್ಯ ಬರುತ್ತದೆ ಎನ್ನಲು ಸಮಾನ ಪ್ರವೃತ್ತಕ (Homeopathic) ತಂತ್ರ (magic) ದ ವಿಚಾರವು ಅದರ ಹಿನ್ನೆಲೆಯಲ್ಲಿದೆ. ಇನ್ನೊಬ್ಬ ಹುಡುಗನ ಪ್ರಕಾರ ಒಡಕ ಕನ್ನಡಿ ನೋಡಿದರೆ ಅಪವಾದ ಬರುತ್ತದೆ.

ಕಾಗೆಗಳು ಗುಂಪಾಗಿ ಸೇರಿ ಕೂಗಿದರೆ ಅದು ಸಮೀಪದ ಮನೆಯವರಿಗೆ ಅನಿಷ್ಟವಾಗುವುದರ ಸೂಚನೆಯೆಂದು ತಿಳಿವ ಹುಡುಗಿಯರುಂಟು. ಆಕಳಿನ ಕಣ್ಣಿನಲ್ಲಿ ನೀರು ಸೋರಿದರೆ ಅದರ ಒಡೆಯನಿಗೆ ಕಷ್ಟ ಬರುವುದರ ಮುನ್ಸೂಚನೆ ಎಂಬ ನಂಬಿಕೆಯಿದೆ.

ಊಟಕ್ಕೆ ಕೂತಾಗ ತುತ್ತು ಗಂಟಲಿಗೆ ಸಿಕ್ಕರೆ ಒಳ್ಳೆಯ ಜನರು ನೆನಪು ಮಾಡುತ್ತಾರೆ ಎಂಬ ಹುಡುಗರ ನಂಬಿಕೆಗೆ ಸಮಂಜಸ ವಿವರಣೆ ಕಾಣುವುದಿಲ್ಲ.

ಪ್ರಾಯ ಬರುತ್ತಿರುವಾಗ ಒಬ್ಬ ಹುಡುಗಿಯು ತನ್ನ ಎದೆಯ ಮೇಲೆ ಎರಡು ಕಡೆಯೂ ಬೀಗು ಬರುತ್ತಿದೆಯೆಂದು ಹೆದರಿಕೊಂಡು ತಾಯಿಗೆ ಈ ಹೆದರಿಕೆಯ ಕಾರಣವನ್ನು ತಿಳಿಸಿದಳು. ತಾನೇ ಹಲವು ಮೂಢನಂಬಿಕೆಗಳನ್ನು ಹೊಂದಿದ್ದ ತಾಯಿಯು ಈ ಸಹಜವಾದ ಬೆಳವಣಿಗೆಗೆ ತನ್ನ ಮಗಳು ಕಲ್ಪಿಸಿದ ಅರ್ಥಕ್ಕೆ ನಕ್ಕು ಅವಳಿಗೆ ವಿವರಣೆಯನ್ನು ನೀಡಬೇಕಾಯಿತು.

ಎರಡು ಕತ್ತರಿಗಳನ್ನು ಒತ್ತಟ್ಟಿಗೆ ಇಟ್ಟರೆ ಜಗಳವಾಗುತ್ತದೆ ಂಬ ನಂಬಿಕೆಯ ಕಾರಣ ಸುಲಭವಾಗಿ ತಿಳಿಯುತ್ತದೆ.

ನೆರತೆ. ನೆರತೆ. (ತುಳು ಹಿದಿಲ್‌ಮರ) ಕೋಲಿನಿಂದ ನಕ್ಕೆ ಹೊಡೆದರೆ ಮುಂದೆ ಅದು ಕರುಹಾಕದು ಎಂಬ ಕಾಕ ಲೀಯ ಘಟನೆಯನ್ನಾಧರಿಸಿದ ನಂಬಿಕೆಯಿಂದ ಅದಕ್ಕೆ ಅಷ್ಟು ನೆರತೆ ಎಂಬ ಹೆಸರು ಕೆಲವು ಕಡೆ ರೂಢವಾಗಿದೆ.

ಕೈಯ ಉಗುರಿನ ಮೇಲೆ ಇರುವ ಬಿಳಿಚುಕ್ಕೆ ಮೊದ್ದ ದರೆ. ಕುಟುಂಬದಲ್ಲಿನ ಒಬ್ಬ ಹೆಂಗಸು ಗರ್ಭಿಣಿಯಾಗಿದ್ದಾಳೆ ಬ ಒಂದು ನಂಬಿಕೆಯಿದೆ.

ಅಡಿಗೆಯನ್ನು ಬೇಯಿಸುವಾಗ ಮೂರು ಕಟ್ಟಿಗೆಗಳು ಇರ ರದು. ಎರಡು, ನಾಲ್ಕು ಈ ರೀತಿ ಇರಬೇಕು.

ಉರಿಯುತ್ತಿರುವ ಕಟ್ಟಿಗೆಗೆ ಕಾಲನ್ನು ತಾಗಿಸಿ ಕೊಡ್ರ ರದು. ಹಾಗೆ ಕಾಲಿಟ್ಟರೆ ಉರಿಬೆಂಡು ಎಂಬ ಬೆರಳಿನ ರೋಗ ಗುತ್ತದೆ. ಬೆರಳ ತುದಿಗೆ ಬೇಗ ರಸಿಗೆಯಾಗಿ ತೀವ್ರವಾದ ದನೆಯಿರುವ ರೋಗ ಉರಿಬೆಂಡು.

ಕೂದಲು ಹಾಕುವಾಗ ಹಣಿಗೆ ಕೆಳಗೆ ಬಿದ್ದರೆ ನೆಂಟರು ಬರು ರೆ ಎಂಬುದು ಕಾಕತಾಲೀಯ ಘಟನೆಯಿಂದ ರೂಢವಾದ ಬಿಕೆ.

ಅಡ್ಡಲಾಗಿ ಬಾಗಿ ಒಲೆಯ ಬೆಂಕಿಯನ್ನು ಉರಿಸಿದರೆ ಅರೆ ಮುಷ್ಟದ ಮಕ್ಕಳು ಹುಟ್ಟುತ್ತಾರೆ. ಶಾಲೆಯ ಮಕ್ಕಳಲ್ಲಿ ಪ್ರಚಾ ದಲ್ಲಿ ಇರುವ ಈ ತರದ ಮೂಢನಂಬಿಕೆಗಳಲ್ಲಿ ಕಾಕತಾಲೀಯ ದ ನಂಬಿಕೆಗಳು ಎಂದೂ ಕೊನೆಯ ನಂಬಿಕೆ ಸರಿಯಾಗಿ ಕೆಲಸ ಾಡಬೇಕೆಂದು ಸೂಚಿಸುವ ನಂಬಿಕೆಯಾಗಿಯೂ ಕಾಣಬಹುದು.

೪. ಹೆಣ್ಣು ಮಕ್ಕಳನ್ನು ಕುರಿತ ಮೂಢನಂಬಿಕೆಗಳು

ಹೆಣ್ಣುಮಕ್ಕಳಿಗೆ ಸಂಬಂಧಪಟ್ಟ ಅನೇಕ ಮೂಢನಂಬಿಕೆಗಳು ಪ್ರಚಾರದಲ್ಲಿವೆ. ಇವುಗಳಲ್ಲಿ ಪ್ರಮುಖವಾದದ್ದು ಗಂಡಸರಿಗಿಂತಲೂ ಹೆಂಗಸರು ಕಡಿಮೆ ಯೋಗ್ಯತೆಯುಳ್ಳವರು ಎಂಬುದು ಇದನ್ನು ನಮ್ಮ ಹೆಂಗಸರೂ ನಂಬಿಕೊಂಡು ತಮ್ಮ ಹೆಣ್ಣು ಮಕ್ಕಳಿಗೂ ನೀನು ನಿನ್ನ ಅಣ್ಣ, ತಮ್ಮನಿಗಿಂತ ಕಡಿಮೆಯುಳ್ಳವಳು ಎಂದು ತಲೆಯಲ್ಲಿ ತುಂಬುತ್ತ ಬಂದಿರುತ್ತಾರೆ. ಇದರ ಫಲವಾಗಿ ಹೆಂಗಸರು ದೊಡ್ಡವರಾದ ಮೇಲೂ ಈ ಕೀಳರಿಮೆ (Inferiority complex) ಅವರಲ್ಲಿ ಬಾಲ್ಯದಿಂದಲೂ ಬೇರೂರಿರುವುದರಿಂದ ಅವರಲ್ಲಿ ಹಲವರು ಹಾಗೆಯೇ ನಂಬಿ ನಡೆಯುತ್ತಾರೆ; ನುಡಿಯುತ್ತಾರೆ. ಗಂಡು ಹುಟ್ಟಿದರೆ ಬಹಳ ಹಿಗ್ಗು. ಹೆಣ್ಣು ಹುಟ್ಟಿದರೆ ಬಹಳ ಕುಗ್ಗು (ಇದಕ್ಕೆ ಇರುವ ಸಾಮಾಜಿಕ, ಆರ್ಥಿಕ ಕಾರಣಗಳನ್ನು ಯೋಚಿಸುವುದನ್ನು ಸದ್ಯಕ್ಕೆ ಬಿಡೋಣ).

"ಅವ ಹೇಗಿದ್ದರೂ ಗಂಡು ಪೋರ. ಗಂಡಾಗಿ ಹುಟ್ಟಿದವ ಬೆಂಡಾಗಿ ತೇಲುವದಿಲ್ಲ (ಗಾದೆ) ನೀನು ಎಷ್ಟಾದರೂ ಹೆಣ್ಣು; ಪರರ ಮನೆಗೆ ಹೋಗಿ ಮುಸುರೆ ಪಾತ್ರೆ ತಿಕ್ಕುವವಳು" ಎಂದು ತಾರತಮ್ಯವನ್ನು ಬಿತ್ತುತ್ತಾರೆ. (ಹುಟ್ಟಿದ ಶಿಶು ಗಂಡಾದರೇನು ? ಹೆಣ್ಣಾದರೇನು ದೇವರು ಕೊಟ್ಟಿದ್ದು" ಎಂದು ಸಮಾ

ಧಾನಿಸುವವರೂ ಇರುತ್ತಾರೆ) ಇಲಿಯು ಹೀಗೆ ಹೇಳಿಕೊಳ್ಳುತ್ತದೆ ಎಂದು ಪದ ಕಟ್ಟಿದ್ದನ್ನು ಒಬ್ಬ ಹುಡುಗಿ ಹೇಳಿದ್ದುಂಟು.

ಮಾಣಿ ಹುಟ್ಟಿದ ಮಗ ರಾಜ ಹುಟ್ಟಿದ
ಅಕ್ಕಕಣಜ ಚಿತ್ರದ ಕಣಜ ಕಟ್ಟಿಲ್ ಹುಟ್ಟಿದ
ಕೂಸು ಹುಟ್ಟಿತು ಕುಕ್ಕಣ್ಣಾಟಿ ಹುಟ್ಟಿತು
ಅಕ್ಕಿಕಣಜ ಚಿತ್ರದ ಕಣಜ ಮುಟ್ಟಿಲ್ ಹುಟ್ಟಿತು
(ಪಾಠಾಂತರ :
ಪಾತ್ರಪಟಗ ಗೀತ್ರಪಡಗ ಮುಟ್ಟಿಲ್ ಹುಟ್ಟಿತು
ಮಡಕೆ ಬಾಯಿ ಕುಡಕೆ ಬಾಯಿ ಮುಚ್ಚಿಲ್ ಹುಟ್ಟಿತು)

ಆಹಾರ ಹಾಕಿದ ಪಾತ್ರೆಗಳನ್ನು ಮುಚ್ಚಿಟ್ಟು. ತನಗೆ ಗದ ಹಾಗೆ ಮಾಡುತ್ತಾರೆಂದು ಇಲಿಗೆ ಹೆಣ್ಣುಮಕ್ಕಳ ಮೇಲೆ ಟ್ಟು. ಹೆಣ್ಣುಮಕ್ಕಳು ಸತ್ತುಹೋಗಲಿ; ಗಂಡು ಮಕ್ಕಳು ದುಕಲಿ ಎಂದೂ ಶಾಪ ಹಾಕುತ್ತದೆ ಎನ್ನುತ್ತಾರೆ. ಆದರೆ, ನಗೆ ಕಲ್ಲುಹೊಡೆದು ಪೀಡಿಸುವ ಗಂಡುಮಕ್ಕಳು ಸಾಯಲಿ, ನ್ನುತ್ತದಂತೆ ಓತೀಕಾಟ.

ಮನೆಯಲ್ಲೀ ಹಡೆದಾಗ, ಗಂಡು ಶಿಶು ಹುಟ್ಟಿದಾಗ ಾಗಟೆ ಬಡಿಯುತ್ತಾರೆ. ಹೆಣ್ಣು ಹುಟ್ಟಿದಾಗ ಬಟ್ಟಲು ಡಿಯುತ್ತಾರೆ. ಗಂಡು ಹುಟ್ಟಿದರೆ ಸಕ್ಕರೆ ಹಂಚುತ್ತಾರೆ. ಹೆಣ್ಣು ಹುಟ್ಟಿದರೆ ಬೆಲ್ಲ ಹಂಚುತ್ತಾರೆ.

ರಜಸ್ವಲೆಯಾಗುವ ದೇಹಧರ್ಮ ಹೆಂಗಸಿಗೆ ಅವಶ್ಯಕ ಾದದ್ದು ಎಂಬುದನ್ನು ಅರಿತೂ ಅದು ಹೆಣ್ಣುಜನ್ಮದ ಪಾಪದ ಲ ಎನ್ನುವವರಿದ್ದಾರೆ. ಮದುವೆಯಾಗುವ ಮೊದಲೇ ರಜ

ಸ್ವಲೆಯಾದರೆ ಕಣ್ಣು ಕಟ್ಟಿ ಕಾಡಿಗೆ ಬಿಡುತ್ತಿದ್ದರಂತೆ. ವಂಶದ ಪಿತೃಗಳಿಗೂ ಕೇಡು ಎಂದೂ ಹೇಳುತ್ತಿದ್ದರು. ಹುಡುಗಿ ರಜ ಸ್ವಲೆಯಾದಾಗ ಏನೋ ಅನಿಷ್ಟವಾದಂತೆ ಅತ್ತು ಆ ಹುಡುಗಿ ಸಹ ಅಳುವಂತೆ ಮಾಡುವ ತಾಯಂದಿರು ಈಗಲೂ ಉಂಟು.

ಗಂಡಿನ ಹಿರಿಮೆಯ ಮೂಢನಂಬಿಕೆ ಮುಂದುವರಿದ ಜನಾಂಗಗಳಲ್ಲೂ ಕಾಣದೆ ಇಲ್ಲ. ಸಾವಿರಾರು ವರ್ಷಗಳಿಂದ ಬಂದ ನಂಬಿಕೆ ಒಮ್ಮೆಲೇ ಹೋಗದು.

ಭವಭೂತಿ ಮಹಾಕವಿ "ಗುಣಾಃ ಪೂಜಾಸ್ಥಾನಂ ಗುಣಿಷು ನಚಲಿಂಗಂ ನಚ ವಯಃ ॥ 'ಗುಣಗಳೇ ಪೂಜೆಯ ಅರ್ಹಸ್ಥಾನ: ಹೆಣ್ಣು ಗಂಡೆಂಬ ಲಿಂಗತಾರತಮ್ಯವಲ್ಲ. ವಯಸ್ಸಲ್ಲ" ಎಂದು ಘೋಷಿಸಿ ಸರಿಯಾದ ದೃಷ್ಟಿಯನ್ನು ಬಹಳ ಹಿಂದೆಯೇ ಪ್ರಕಟಿಸಿದ್ದನು. ಆದರೆ ಪರಂಪರೆಯ ಪ್ರಭಾವ ಬಲವತ್ತರವಾದುದು. ದಿ. ಇಂದಿರಾ ಗಾಂಧಿಯವರಂಥ ಅಸಾಧಾರಣ ಯೋಗ್ಯತೆಯ ಮುಂದಾಳು (ಅಂತರ್ಯದಲ್ಲಿ ಹಾಗೆ ತಿಳಿಯದಿದ್ದರೂ) ಒಮ್ಮೆ ಹೀಗೆ ಹೇಳಿದರು. "......ಪಕ್ಷದವರು ನನಗೆ, ಕೇವಲ ಒಬ್ಬ ಹೆಣ್ಣಿಗೆ (Mere woman) ಹೆದರುತ್ತಾರೆ".

ಹೆಣ್ಣುಮಕ್ಕಳು ಗಾಯತ್ರಿಯನ್ನು ಹೇಳಿದರೆ ನರಕವಾಗುವುದೆಂಬುದೂ ಇಂಥ ನಂಬಿಗೆಯ ಪರಿಣಾಮ.

ಹೆಣ್ಣುಮಕ್ಕಳು ಬೂರಕಾಯಿ (ಕೊಬ್ಬರಿಯ ಬದಲು ಹಿಂಜಿದ ಅರಳೆಯಂತೆ ಉಂಟಾಗುವ ತೆಂಗಿನಕಾಯಿ) ತಿನ್ನಬಾರದು ಎನ್ನಲು ಮುಂದೆ ಹೊಕ್ಕಳ ಬೂರು (ಉಬ್ಬಿದ) ಮಕ್ಕಳು ಜನಿಸುವರೆಂಬುದು ಕಾರಣ.

ಹೆಣ್ಣುಮಕ್ಕಳು ಕುಂಕುಮವನ್ನು ಎರಡು ಹುಬ್ಬುಗಳ ನಡುವೆ ಹಚ್ಚಿಕೊಳ್ಳಬಾರದು. ಕುಂಕುಮ ತೀರ ಸಣ್ಣದಾಗಿಯೂ ಇರಬಾರದು, ಹಾಗಿದ್ದರೆ ಮುಂದೆ ಗಂಡನ ಆಯುಷ್ಯ ಕಡಿಮೆಯಾಗುವುದೆಂಬ ಪರಿಣಾಮವಂತೆ.

ಹೆಣ್ಮಕ್ಕಳ ಬಳೆ ಒಡೆದರೆ ಸೋದರಮಾವನಿಗೆ ಅನಿಷ್ಟವೆಂಬ ನಂಬಿಕೆಗೆ ಸೋದರ ಮಾವನೇ ಅವಳನ್ನು ಮದುವೆಯಾಗುತ್ತಿದ್ದ ಪದ್ಧತಿಯು ಕಾರಣವಾಗಿ. ಅವನ ಆಯುಷ್ಯಕ್ಕೆ ಕೇಡು ಎಂಬುದರ ಸೂಚನೆ ಇದು.

ಹೆಣ್ಮಕ್ಕಳ ಮೈಮೇಲೆ ಬಹಳ ಎಳ್ಳು (ಎಳ್ಳಿನಾಕಾರದ ಕಪ್ಪು ಚಿಹ್ನೆಗಳು) ಇದ್ದರೆ ಬಹಳ ಚಿನ್ನದ ಒಡವೆ ಹಾಕಿಕೊಳ್ಳುತ್ತಾಳೆ ಎಂದು ಹುಡುಗಿಯರಲ್ಲಿ ನಂಬಿಕೆಯಿದೆ.

"ಹೆಣಮಗಳಿಗೆ ಎಡರ ಸುಳಿ ಇದ್ರ ಆಕಿ ಮನಿಗೆ ಎದುರಾಗ್ತಾಳ ಇಲ್ಲಾಂದ್ರ ಗಂಡ ಸಾಯ್ತಾನ" ಎಂಬ ನಂಬಿಕೆ ಕಾಕತಾಳೀಯ ಇರಬಹುದು. (ಉ. ಕ. ಜನಪದ ನಂಬಿಕೆಗಳು ಡಾ. ಎಂ. ಎಸ್. ಲಠ್ಠೆ).

"ತಲೆಯಲ್ಲಿ ದೂರ ದೂರದಲ್ಲಿ ಎರಡು ಅದಕ್ಕಿಂತ ಹೆಚ್ಚು ಸುಳಿಗಳಿರುವ ಹೆಣ್ಣನ್ನು ಮಂಗಳವಲ್ಲೆಂತ ನಿರಾಕರಿಸುತ್ತಿದ್ದರು." (ಉದಯವಾಣಿ ವಿಶೇಷ ಸಂಚಿಕೆ ೧೯೮೫ ಡಾ. ಎಂ. ಜಿ. ಬಿರಾದಾರರ ಲೇಖನ ಪು. ೧೮೩–೧೮೭).

ಹೆಣ್ಣುಮಕ್ಕಳು ಅಶ್ವತ್ಥ ವೃಕ್ಷದ ಪ್ರದಕ್ಷಿಣೆ ಮಾಡಬೇಕು ಎಂಬ ನಂಬಿಕೆ, ಮೂಢನಂಬಿಕೆ ಎಂದು ಒಬ್ಬ ಹುಡುಗಿ ಹೇಳಿದ್ದಾಳೆ. ಆದರೆ, ಇದರಲ್ಲಿ ಆರೋಗ್ಯ ದೃಷ್ಟಿಯಿದೆ.

೯. ಕಾಕತಾಲೀಯ ಘಟನೆಗಳ ಹಿನ್ನಲೆ

ಕಾಗೆ ಟೊಂಗೆಯ ಮೇಲೆ ಕೂಡ್ರುವುದಕ್ಕೂ ಟೊಂಗೆ ಮುರಿವುದಕ್ಕೂ ಸರಿ ಹೋಯಿತು ಎಂಬಂತೆ, ಘಟನೆಗಳು ಹೊಂದಿಕೊಳ್ಳುವುದುಂಟು. ಮಿತ್ರರು, ನೆಂಟರು ಯಾರಾದರೂ ಬಂದವರು ಹೊರಟು ಹೋದ ಕೂಡಲೆ ದೀಪವನ್ನು ಆರಿಸಬಾರದು ಎಂಬ ನಂಬಿಕೆ ಇಂಥ ಕಾಕತಾಲೀಯ ಘಟನೆಯ ಹಿನ್ನೆಲೆಯನ್ನು ಹೊಂದಿರಬಹುದು.

ನಮ್ಮ ಮನೆ ಮೂಢನಂಬಿಕೆಗಳ ಒಂದು ತವರುಮನೆಯಾಗಿದೆ. ನನ್ನ ಶ್ರೀಮತಿಯು ತಂದೆಯ ಮನೆಯಿಂದ ಅನೇಕ ಮೂಢನಂಬಿಕೆಗಳನ್ನು ಬಳುವಳಿಯಾಗಿ ತಂದು ಪ್ರೋಷಿಸಿದ್ದಳು.

ಎಲ್ಲಿಗಾದರೂ ಹೋದರೆ ಮೂರುದಿನ ಆದಾಗ ಅಲ್ಲಿಂದ ಬರಬಾರದು. ಏಳುದಿನ, ಒಂಬತ್ತು ದಿನ, ಹನ್ನೊಂದುದಿನ ಸಹ ಆದಾಗ ಮನೆಗೆ ಆದಿನ ತಿರುಗಿ ಹೊರಟು ಬರಬಾರದು. ಬಂದರೆ ನಾನಾ ತರದ ತ್ರಾಸು ಕಟ್ಟಿಟ್ಟ ಬುತ್ತಿ. ಈ ರೀತಿ ಲೆಕ್ಕಾಚಾರ ಪಾಲಿಸದಿದ್ದಾಗ ಒಣ ಕೆಮ್ಮಲೋ ಜ್ವರವೋ ಏನಾದರೂ ಕಷ್ಟವಾದ ಅನುಭವ.

ಇಂಥ ಅನುಭವಗಳು ಮಕ್ಕಳಿಗೂ ಮೂಢನಂಬಿಕೆ ಗಟ್ಟಿಯಾಗುವಂತೆ ಮಾಡಿವೆ. ಕಾಗೆ ಕರೆಕರಗುಟ್ಟುವಾಗ ನನ್ನ ಕಿರಿಮಗಳು ಕಾಗೆಗೆ ಹೇಳಿದಳು. "ಕಾಕೇ, ಈ ಪ್ರಕಾರ ಕರಗುಗುಟ್ಟುತ್ತಾ ಇರುವೆ. ನಮ್ಮ ಮನೆಗೆ ಯಾರು ಬರುತ್ತಾರೆಯೋ ?"

ಆ ಕಾಗೆ ತನ್ನ ಭಾಷೆಯಲ್ಲೇ ಮತ್ತೆ ಹೇಳಿತು. "ನೆಂಟರು, ಯಾರೋ ಅತಿಥಿಗಳು ಬರುತ್ತಾರೆ." ಹಿಂದೆ ಹಲವು ಸಲ ಹೀಗೆ ಕೂಗಿದಾಗ ನೆಂಟರು ಬಂದಿದ್ದರು. ಬಾರದಿದ್ದರೆ ಆ ಕಾಗೆಯು ನೆನಪಿನಲ್ಲಿ ಉಳಿದಿರುವದಿಲ್ಲ.

ಕಾಗೆ ಕೂಗುವಾಗ ಒಂದು ತರದಲ್ಲಿ ಕುಕ್ಕುಕುಕ್ಕು ಎಂದು ಸಪ್ಪು ಮಾಡಿದರೆ, ಬಾವಿಕಟ್ಟೆಯ, ಅಥವಾ ಮರದ ಟೊಂಗೆಯ ಮೇಲೆ ಕುಳಿತು. ತನ್ನ ಚುಂಚನ್ನು ತಲೆಯ ಆಚೆ ಒಮ್ಮೆ ಈಚೆ ಒಮ್ಮೆ ತಿರುಗಿಸಿ. ಚುಂಚನ್ನು ತಿಕ್ಕಿದರೆ, ಕಾಗೆ ಅಕ್ಕಿಯನ್ನು ತೋರಿಯುತ್ತದೆ. (ಅನ್ನ ತಯ್ಯಾರು ಮಾಡಲು ಸೂಚನೆ) ಯಾರಾದರೂ ಮನೆಗೆ ಊಟಕ್ಕೆ ಬರುತ್ತಾರೆ ಎಂದು ತಿಳಿಯಬೇಕು.

ಬೆಕ್ಕು ತನ್ನ ಮುಂಗಾಲಿನಿಂದ ಮೋರೆ ತಿಕ್ಕಿಕೊಂಡರೂ ನೆಂಟರು ಬರುವರಂತೆ. ಇಲ್ಲಿ ಬರುವವ ಇಲ್ಲಿ ಉಣ್ಣುವನೆಂದು ಅಭಿನಯದಿಂದ ಮೊದಲೇ ಸೂಚನೆ ಕೊಟ್ಟ ಹಾಗೆ ಇದು. ರಾತ್ರಿ ಉಣ್ಣುವನ್ನು ತಂದರೆ ನೆಂಟರು ಬರುತ್ತಾರೆ ಎಂಬ ನಂಬಿಕೆಯಿದೆ.

ಬಿದಿರು ಕಳಲೆಯನ್ನು ಹೆಣ್ಣು ಮಕ್ಕಳು ಮುರಿಯಬಾರದಂತೆ. ಬೂದು (ಕರಿ) ಕುಂಬಳ ಕಾಯಿಗೆ ಮೊದಲು ಗಂಡಸರೇ ಕಡಿದು ತುಂಡು ಮಾಡಬೇಕು, ಹೆಂಗಸರು ಪ್ರಥಮತಃ ಕಡಿಯಬಾರದು. ಇದಕ್ಕೆ ಹಿಂದಿನ ಯಾವ ಕಹಿಘಟನೆ ಕಾರಣವೋ ಏನೋ. ಬೂದುಗುಂಬಳಕಾಯಿ ದೆವ್ವಗಳಿಗೆ ಬಲಿಕೊಡಲು ಉಪಯೋಗಿಸುವಂಥದು. ಬೂದುಗುಂಬಳ ಬಳ್ಳಿಯನ್ನು ನೆಡಬಾರದು. ತಾನಾಗಿ ಬೆಳೆಯಬೇಕು ಎಂದೂ ನಂಬುವುದುಂಟು. ಕೆಲವೆಡೆಗಳಲ್ಲಿ ಕುಂಬಳಕಾಯನ್ನು ಮೇಲಿನಿಂದ ಕೆಳಗೆ ಒಗೆದೇ ಭಾಗಮಾಡುತ್ತಾರೆ. ಕಡಿದು ತುಂಡು ಮಾಡಿದರೆ ಕೇಡು ಎಂದು ನಂಬುತ್ತಾರೆ.

ಕಸಬರಿಗೆಯಿಂದ ನಾಯಿಗೆ ಹೊಡೆದರೆ ಅದು ಕೆಮ್ಮುತ್ತದೆ ಎಂಬುದೂ ಯಾವಾಗಲೋ ಹೀಗೆ ಹೊಡೆದಾಗ ಅದು ಕೆಮ್ಮಿದ ಅನುಭವದಿಂದ ಪ್ರಚಾರಕ್ಕೆ ಬಂದುದು. ಕಾಗೆಯ ಕಾಲಿಗೆ ನಮ್ಮ (ಹೆಣ್ಣುಮಕ್ಕಳ) ಕೂದಲು ಸಿಕ್ಕರೆ ಕೂದಲು ಉದುರುತ್ತದೆ ಕೂದಲನ್ನು ಬಾಚಿದ ಮೇಲೆ ತಿರುಗಿ ಒಮ್ಮೆ ಬಾಚಿಕೊಳ್ಳದಿದ್ದರೆ ಕುಂಟ ಗಂಡ ಸಿಗುತ್ತಾನೆ ಎಂದು ಹೇಳುತ್ತಾರೆ.

ಹಲವು ನಿಮಿತ್ತಗಳೂ ಶಕುನಗಳೂ ಕಾಕತಾಲೀಯ ಘಟನೆಗಳ ಅನುಭವದಿಂದಲೇ ರೂಢವಾಗಿದ್ದಿರಬೇಕು. ಉದಾ :–

ಹೆಂಗಸರ ತಲೆಯ ಮೇಲೆ ಕಾಗೆ ಪಿಷ್ಟಿ ಹಾಕಿದರೆ ಸಾವಿನ ಸುದ್ದಿ ಬರುತ್ತದೆ. ಒಳ್ಳೆಯ ವಿಚಾರವನ್ನು ಶುಕ್ರವಾರ ರಾತ್ರಿಯಲ್ಲಿಯೂ ಮಂಗಳವಾರ ಹಗಲಿನಲ್ಲಿಯೂ ಮಾತನಾಡಬಾರದು. ಕಾಲಿನ ಹೆಬ್ಬೆರಳಿಗಿಂತ ಎರಡನೆಯ ಬೆರಳು ಉದ್ದವಿದ್ದರೆ ಅತ್ತೆಯ ಹತ್ತಿರ ಸೊಸೆಯ ಜರೆಸಿಕೊಳ್ಳುತ್ತಾಳೆ. ಕೆಂಭೋತ ಕಂಡರೆ ಸಿಹಿಯ ತಿಂಡಿ ಸಿಗುತ್ತದೆ, ಗರ್ಭಿಣಿಯ ಮೈಮೇಲೆ ಹೆಣ್ಣು ಶಿಶು ಮೂತ್ರ ಹೊಯ್ದರೆ, ಆ ಗರ್ಭಿಣಿಗೆ ಹೆಣ್ಣು ಶಿಶುವೇ ಹುಟ್ಟುತ್ತದೆ.

'ಬೆಕ್ಕನ್ನು ಮುಟ್ಟಿದರೆ ದೊಡ್ಡರೋಗ ಬರತದೋ ಅಜ್ಜಾ ? ಎಂದು ಎನ್. ಕರುಣಾಕರ (೧೨ ವರ್ಷ) ಕಾರಂತಜ್ಜನನ್ನು ಕೇಳಿದ್ದು 'ತರಂಗ' ಪತ್ರಿಕೆಯಲ್ಲಿ ಬಾಲವನದಲ್ಲಿ ಬಂದಿದೆ.

ಒಡಕು ಕನ್ನಡಿಯನ್ನು ನೋಡಿದರೆ ಅಪವಾದ ಬರುತ್ತದೆ ಎಂಬ ನಂಬಿಕೆಯಿದೆ, ಹಲ್ಲು ಬಿದ್ದರೆ ಹಂಚಿನ ಮೇಲೆ ಹಾಕಿದರೆ ಬೇರೆ ಹಲ್ಲು ಬೇಗ ಹುಟ್ಟುತ್ತದೆ. ಅದನ್ನು ನೆಲಕ್ಕೆ ಒಗೆಯಬಾರದು.

೨೦. ಜನಪದ ವೈದ್ಯದಲ್ಲಿನ ಮೂಢನಂಬಿಕೆಗಳು

ಜನಪದ ವೈದ್ಯದಲ್ಲಿ ತುಂಬಾ ಉಪಯುಕ್ತ ಚಿಕಿತ್ಸೆಗಳು ಉಂಟು. ಆದರೆ, ಇದರಲ್ಲಿ ಅನೇಕ ಮೂಢನಂಬಿಕೆಗಳೂ ಸೇರಿವೆ. ಹಾವು ಕಚ್ಚಿದರೆ, ಕೂಡಲೆ ಕಚ್ಚಲ್ಪಟ್ಟವನು ಹಾವಿನ ಬಾಲವನ್ನು ಕಚ್ಚಬೇಕು. ಅದರ ಬಾಲದಲ್ಲಿ ಅಮೃತವಿರುತ್ತದೆ. ಆದರಿಂದ ಆತ ಸಾಯದೆ ಬದುಕಿರುತ್ತಾನೆ ಎಂಬುದು ಒಂದು ಮೂಢನಂಬಿಕೆ.

ಮಕ್ಕಳಾಗಲಿ, ದೊಡ್ಡವರಾಗಲಿ ಹೆಚ್ಚು ಉಪ್ಪನ್ನು ತಿನ್ನುವುದು ಆರೋಗ್ಯಕ್ಕೆ ಹಾನಿಕರ. ಆದರೆ, ಹೀಗೆ ತಿನ್ನಬಾರದೆನ್ನಲು, ಎಲುಬು ಲಡ್ಡಾಗು (ದುರ್ಬಲವಾಗು) ತ್ತದೆ ಎನ್ನುವುದು ಸಮಂಜಸ ವಿವರಣೆಯಲ್ಲ. ಉಪ್ಪನ್ನು ಕೈಯಲ್ಲಿ ಕೊಟ್ಟರೆ ಮುಪ್ಪು ಬೇಗ ಬರುವುದೆಂಬ ಕೆಲವು ಮಕ್ಕಳ ನಂಬಿಕೆಯೂ ಸರಿಯಾದುದಲ್ಲ.

ಕೈಕಾಲು ತೊಳೆಯದೆ ಒಳಗೆ ಬಂದರೆ ಕಣ್ಣು ಕುರುಡಾಗುತ್ತದೆ ಎಂಬುದರಲ್ಲಿ ಸ್ವಚ್ಛತೆಯ ದೃಷ್ಟಿಯಿದ್ದರೂ ಈ ನಂಬಿಕೆ ಸರಿಯಾದುದಲ್ಲ. ಆದರೆ, ಮೂಗಿನಲ್ಲಿನ ಕೂದಲುಗಳನ್ನೆಲ್ಲ ತೆಗೆದರೆ ದೃಷ್ಟಿಮಂದವಾಗುವುದೆಂಬುದು ನಿಜವಾದಸಂಗತಿ.

ಗಂಡು ಶಿಶುವಿಗೆ ಮೇಲ್ಭಾಗದಲ್ಲಿ ಮೊದಲು ಹಲ್ಲು ಬಂದರೆ ಸೋದರ ಮಾವನಿಗೆ ಯಾಕೆ ಕಷ್ಟವಾಗಬೇಕು ? ಹಾಗೆ ಆದರೆ, ದೋಷ ಪರಿಹಾರಕ್ಕೆ ಚಿಕಿತ್ಸೆ ಅಂದರೆ, ಮೆಟ್ಟಿಲಿನ ಮೇಲೆ

ಶಿಶುವನ್ನು ನಿಲ್ಲಿಸಿ. ಮಾವನು ಕಂಚಿನ ಬಟ್ಟಲಿನಲ್ಲಿ ಹಾಲು ಹಾಕಿ ಕುಡಿಸಬೇಕು. ಮತ್ತು ಇದ್ದಿಲು ತೆಗೆದುಕೊಂಡು ನೆಲಕ್ಕೆ ಗೀಚಿ, ತನಗೆ ರಕ್ಷಣೆಮಾಡು ಎಂದು ಹೇಳಬೇಕು. ಯಾರಿಗೆ ಇಂಥ ಪ್ರಸಂಗವಾದಾಗ ಕೇಡಾಗಿತ್ತೋ ಏನೋ.

ಕಣ್ಣು ರೆಪ್ಪೆಗೆ ಚಮಕಲು (ಕಣ್‌ಕುರು) ಆದರೆ, ಉಪ್ಪನ್ನು ಬಟ್ಟೆಯಲ್ಲಿ ಗಂಟುಕಟ್ಟಿ ಸಮುದ್ರಕ್ಕೆ ಒಗೆದರೆ ಗುಣವಾಗುವ ದೆಂಬ ಚಿಕಿತ್ಸೆ ಮೂಢನಂಬಿಕೆಯೇ ಸರಿ.

ಇನ್ನೂ ಮಾತುಬಾರದ ಶಿಶುಗಳಿಗೆ ಬಾಳೆಹಣ್ಣು ಕೊಡ ಬಾರದು; ಮಾತು ಸರಿಯಾಗಿ ಬರುವುದಿಲ್ಲ ಎಂದು ಹುಡುಗ ರನ್ನು ತಡೆಯುತ್ತಾರೆ. ಇದು ಸರಿಯಾದ ಜ್ಞಾನವಲ್ಲ. ಬೀಜ ತೆಗೆದ ಬಾಳೆಹಣ್ಣು ಕೊಟ್ಟರೆ ಒಳ್ಳೆಯದು ಎಂದು ಚಿಕಿತ್ಸಕರು ಹೇಳುತ್ತಾರೆ. ಆದರೆ ಪಿತ್ತಾಶಂತದ ಕಾಹಿಲೆಯಲ್ಲಿ ಬಾಳೆಹಣ್ಣು ವರ್ಜ್ಯವಾಗಿದೆ.

ಬಾಳೆಹಣ್ಣು ತಿಂದಾಗ ನಾಲಿಗೆ ಜಿಗುಟಾದಂತಾಗಿ, ದಪ್ಪ ವಾದಂತೆ ಕಾಣುವುದೇ ಬಾಳೆಹಣ್ಣನ್ನು ನಿಷೇಧಿಸಲು ಕಾರಣ ವಿದ್ದೀತು.

ಗರುಡ ಕೂಗುವಾಗ ಹೊಟ್ಟೆಯನ್ನು ತಿಕ್ಕಿಕೊಂಡರೆ ಜ್ವರ ಗಡ್ಡೆ ಕರಗುತ್ತದೆ ಎಂಬ ನಂಬಿಕೆ ಚಿಕಿತ್ಸೆಯದಾದರೂ ಅದರ ಕಾರಣ ತಿಳಿಯುವುದು ಕಷ್ಟ.

ಉಡದ ಚರ್ಮವನ್ನು ತೊಡೆಯ ಕೆಳಗೆ ಹಾಕಿ ಕುಳಿತರೆ ಬಹಳ ಹಸಿವೆ ಯಾಗುವುದೆಂದು ತಿಳಿಸಿದ್ದಾರೆ. ಇದರಲ್ಲಿ ಸತ್ಯ ವಿದೆಯೋ ಏನೆಂದು ಪರೀಕ್ಷಿಸಿ ನೋಡಬೇಕಾಗಿದೆ.

೧೧. ಜನಪದ ಮನೋವಿಜ್ಞಾನ

ಮಕ್ಕಳಾಗಲಿ, ದೊಡ್ಡವರಾಗಲಿ ಎಲ್ಲಿಯಾದರೂ ಹೆದರುವರೆ, ಏನನ್ನೋ ಕಂಡಾದರೂ ವಿಕಲ್ಪದಿಂದ ಸಹ ಹೆದರಿದರೂ ಅವರಿಗೆ ಜ್ವರ ಬರಬಹುದು.... ಯಾವುದೊಂದು ಸ್ಥಳದಲ್ಲಿ ಹೆದರಿದ್ದರಿಂದಾಗಿ ಬುದ್ಧಿಭ್ರಮಣೆ ಹೊಂದಿದ ಮಕ್ಕಳ, ಇಲ್ಲವೆ, ದೊಡ್ಡವರ ಉದಾಹರಣೆಗಳು ಅಲ್ಲಲ್ಲಿ ಕಂಡುಬರುತ್ತವೆ. ಕ್ವಚಿತ್ತಾಗಿ ಹೆದರಿಕೆಯು ಪರಿಣಾಮವಾಗಿ ಸಾವಿಗೂ ಈಡಾಗಬಹುದು.

ನಮ್ಮ ನೆರೆಮನೆಯವರ ಕೆಲಸಗಿತ್ತಿಯ ಮಗಳು ಒಂದೆಡೆಯಲ್ಲಿ ಹೆದರಿ ಜ್ವರದಿಂದ ಪೀಡಿತಳಾಗಿದ್ದಾಗ, ಭಟ್ಟರ ಹತ್ತಿರ ಹೋಗಿ ಮಂತ್ರಿಸಿದ ನೂಲನ್ನು ತಂದು ಕಟ್ಟಿದ ಮೇಲೆ ಅವಳ ಹೆದರಿಕೆ ಪರಿಹಾರವಾಗಿ ಅವಳಿಗೆ ಗುಣವಾದುದುಂಟು. ಈ ರೀತಿ ಮಾನಸಿಕ ಭಾವನೆಗಳ ಪರಿಣಾಮ ದೈಹಿಕವಾಗಿಯೂ ಆಗುವುದು ವಾಸ್ತವಿಕ ಸಂಗತಿ.

ಮಕ್ಕಳು ಬಿದ್ದು ಹೆದರಿದಾಗ, ಆ ಜಾಗದ ಮಣ್ಣನ್ನು ತಲೆಯ ಸುತ್ತಲೂ ಸುಳಿಸಿ ಚೆಲ್ಲಲು ಹೇಳುತ್ತಾರೆ. ರಣರಣ ಬಿಸಿಲಿನಲ್ಲಿ ಬಂದ ಒಬ್ಬ ಹುಡುಗಿಯು ತಾಯಿಯ ಹತ್ತಿರ ಹಾದಿಯ ಬಜ್ಜನ್ನು (ಸಣ್ಣ ಕಲ್ಲ ಹರಳು) ತನ್ನ ತಲೆಗೆ ಸುಳಿದು ಹಾಕು ತಾನು ಹೆದರಿದ್ದೇನೆ" ಎಂದುದು ಒಂದು ಒನಕೆ ಹಾಡಿನ ತ್ರಿಪದಿಯಲ್ಲಿದೆ.

ಭೂತ ಬಡದಿದೆಯೆಂದು ಅದನ್ನು ಉಚ್ಚಾಟಿಸಲು ಮಾಡುವ ಆರ್ಭಟಗಳೂ ಹಾಕುವ ಬೆತ್ತದ ಛಡಿಯೇಟುಗಳೂ ಇನ್ನಿತರ ಮಾಟದ ಕ್ರಮಗಳೂ ವಿಭೂತಿ, ತೀರ್ಥಗಳೂ ಮಾನಸಿಕವಾಗಿ ಪೆಡತಲೆಯಲ್ಲಿ ಸೇರಿದ ಈ ಭೂತದ ಹೆದರಿಕೆಯನ್ನು ಉಚ್ಚಾಟಿಸಲು ಸಹಾಯಕವಾಗಬಹುದು. ಆದರೆ, ಆರ್ಥಿಕವಾಗಿ ಒಳ್ಳೆಯ ಪರಿಸ್ಥಿತಿಯಿಲ್ಲದ ಜನರು ಅಜ್ಞಾನಿಗಳೂ ಆಗಿದ್ದು ಇಂಥ ಕಾರಣಗಳಿಂದ ಶೋಷಣೆಗೊಳಗಾಗುವುದು ಅನಿಷ್ಟವಾದುದಾಗಿದೆ.

ಮಕ್ಕಳು ಕರುವಿನ ಬೆನ್ನನ್ನು ಮುಟ್ಟಿದರೆ ಅದು ಸೊರಗುತ್ತದೆ ಎನ್ನುತ್ತಾರೆ. ಹೀಗೆ ಮುಟ್ಟಿದಾಗ ಅದಕ್ಕೆ ಒಂದು ತರದ ಮೈಸಡುಗು (ಹೀಕರಿಕೆ) ಆಗಿ ಅದು ನಿರುತ್ಸಾಹ ಹೊಂದಿದಂತೆ ಕಾಣುತ್ತದೆ. ಈ ಕುಗ್ಗುವಿಕೆ ಇದಕ್ಕೆ ಕಾರಣವಿರಬಹುದು.

ಸಾಕು ಪ್ರಾಣಿಗಳಿಗೆ ಹೊಡೆದರೂ ತಿರಸ್ಕಾರ ಮಾಡಿದರೂ ಗದರಿಸಿದರೂ ಅವುಗಳಿಗೆ ಮಾನಸಿಕವಾಗಿ ಪರಿಣಾಮವಾಗಿ ಅವು ಆರೋಗ್ಯವನ್ನು ಕಳೆದುಕೊಳ್ಳುವ ಸಾಧ್ಯತೆಯಿರುತ್ತದೆ.

ರೋಗ ವಾಸಿಯಾಗಲು ಹೇಳಿಕೊಳ್ಳುವ ಹರಕೆಗಳೂ ಹುಡುಗರು ಪರೀಕ್ಷೆಯಲ್ಲಿ ಉತ್ತಮ ಫಲಿತಾಂಶ ಪಡೆಯಲು ಕಟ್ಟುವ ಹರಕೆಗಳೂ ತಮ್ಮಷ್ಟಕ್ಕೆ ಪರಿಣಾಮಕಾರಿಯಾಗಿಲ್ಲದಿದ್ದರೂ ಮಾನಸಿಕ ಸ್ಥೈರ್ಯ ಕಾದುಕೊಳ್ಳಲು ನೆರವಾಗುತ್ತವೆ.

೧೨. ಪುರಾಣ ಕಥೆಗಳಿಂದ ಪ್ರಚುರವಾದ ಮೂಢನಂಬಿಕೆಗಳು

ಸೀತೆಯು ಅಶೋಕವನದಲ್ಲಿ ದುಃಖದಿಂದ ಕಾಲಕಳೆದಿದ್ದಳು. ಆದ್ದರಿಂದ ಅಶೋಕ ಗಿಡದ ಹೂಗಳನ್ನು ಮುಡಿಯಬಾರದು. ಅದು ದೇವರ ಪ್ರಸಾದವಾದರೆ ಮಾತ್ರ ಮುಡಿಯುತ್ತಾರೆ.

ಬಾಗಿಲು ಮೆಟ್ಟಲಿನ ಮೇಲೆ ನಿಂತು ಭಿಕ್ಷೆ ನೀಡಬಾರದು ಎನ್ನಲು ರಾವಣನು ಸೀತೆಯನ್ನು ಕದ್ದೊಯ್ದು ಸಂದರ್ಭ ನಿಮಿತ್ತ ವಾಗಿದ್ದೀತು. ತಲೆಯ ಮೇಲೆ ಕೈ ಹೊತ್ತುಕೊಂಡು ಕೂತರೆ ದಾರಿದ್ರ್ಯ ಬರುತ್ತದೆ. ಊಟಕ್ಕೆ ಕೂತಾಗಲಂತೂ ಹಾಗೆ ಮಾಡಲೇಬಾರದು. ಶಿವ ನಪ್ರಾಣಲಿಂಗವನ್ನು ತಂದ ರಾವಣನು ಗಣಪತಿಯ ಕೈಯಲ್ಲಿ ಕೊಟ್ಟು, ಮೂತ್ರಮಾಡಲು ಹೋದ ನಂತೆ. "ಮೂರು ಬಾರಿಗೆ ಕರೆವೆ ಆ ಲಿಂಗವ ಧಾರುಣಿ ಯೊಳಗಿಡುವೇ ॥" ಎಂದು ಗಣಪತಿ ಹೇಳಿಯೇ ಇದ್ದನು. ಮೂರು ಬಾರಿ ಕರೆದು, ರಾವಣ ಬಾರದಿರಲು ಆ ಲಿಂಗವನ್ನು ಭೂಮಿಯ ಮೇಲಿಟ್ಟನು. ರಾವಣ ಬಂದು ಪಾತಾಳದವರೆಗೆ ಇಳಿದ ಲಿಂಗವನ್ನು ಎಬ್ಬಿಸಲಾರದೆ ಹತ್ತು ತಲೆಗಳ ಮೇಲೆ ಕೈಹೊತ್ತುಕೊಂಡು ವೈಫಲ್ಯದಿಂದ ಹೋದ ಕತೆಯು ಹಿನ್ನೆಲೆ ಇದರಲ್ಲಿದೆ.

ಕಾಲು ತೊಳೆಯುವಾಗ ಹಿಮ್ಮಡ ಪೂರ್ತಿ ನೆನೆಯಬೇಕು ಎಂದು ಹಿರಿಯರು ಹೇಳುತ್ತಿದ್ದರು. ಶನಿಮಹಾತ್ಮೆ ನಾಟಕ, ಮತ್ತು ಪುರಾಣ ಕಥೆಯ ಪ್ರಚಾರದಿಂದ ವಿಕ್ರಮನಿಗೆ ಶನಿ ಹಿಡಿದುಕೊಂಡು ಕಾಟಕೊಡಲು ಈ ಲೋಪವೇ ಕಾರಣ ಎಂಬ ಹಿನ್ನೆಲೆಯಿಲ್ಲಿದೆ.

ಮಧ್ಯಾಹ್ನದ ಮೇಲೆ ಹೆಂಗಸರು (ಹುಡುಗಿಯರಾದರೂ) ತುಲಸಿ ಕೊಯ್ಯಬಾರದೆಂಬುವಕ್ಕೆ ಒಂದು ಜನಪದ ಕಥೆಯ ಹಿನ್ನೆಲೆಯಿದೆ. ದ್ರೌಪದಿ ಮಧ್ಯಾಹ್ನದ ಮೇಲೆ ತುಲಸಿಯ ಪ್ರದಕ್ಷಿಣೆ ಮಾಡುತ್ತಿದ್ದಾಗ ಅವಳ ಸೀರೆಯ ಸೆರಗು ಸುತ್ತಿ ಒಂದು ತುಲಸಿಕೊಂಬೆ ಮುರಿದುಬಿತ್ತು. ಅವಳು ಸತ್ಯವನ್ನೇ ಹೇಳಿದರೆ ಆ ಕೊಂಬೆ ಮೇಲೇರಿ ಪುನಃ ತನ್ನ ಟೊಂಗೆಯನ್ನು ಸೇರುತ್ತದೆಂದು ಕೃಷ್ಣ ಹೇಳಿದನು. ಅವಳು ಬೇರೆ ಏನನ್ನು ಹೇಳಿದರೂ ಮೇಲೇರದ ಆ ಕೊಂಬೆ ತಾನು ಕರ್ಣನನ್ನೂ ಪ್ರಿತಿಸುತ್ತೇನೆ ಎಂದಾಗ ಏರಿ ಕೊಂಬೆ ರೆಂಬೆ ಸೇರಿತಂತೆ.

ಚೌತಿಯ ಚಂದ್ರನನ್ನು ನೋಡಿದರೆ ಅಪವಾದ ಬರುತ್ತದೆ ಎಂಬ ಕುರಿತ ಗಣಪತಿಯ ಶಾಪದ ಕಥೆ ಸಾಮಾನ್ಯವಾಗಿ ಪರಿಚಿತವೇ ಆಗಿದೆ. ಚೌತಿಯ ಮರುದಿನದ ಇಲಿ ಪಂಚಮಿಯ ದಿನ ಈ ಶಾಪದ ಕಥೆ ಕೇಳಿದರೆ ಆ ದೋಷ ಪರಿಹಾರವಾಗುತ್ತದೆ ಎಂದು ಈಗಲೂ ಆ ಪುರಾಣ ಕಥೆಯನ್ನು ಹೇಳಿಸುತ್ತಾರೆ. ಚೌತಿಚಂದ್ರನನ್ನು ನೋಡುವುದನ್ನು ಕೆಲವು ಹುಡುಗರು ಈಗಲೂ ಸಾಧ್ಯವಿದ್ದ ಮಟ್ಟಿಗೆ ತಪ್ಪಿಸಿಕೊಳ್ಳುವುದುಂಟು. ಆದರೆ ಸಂಗತಿ

ಗರ ಇಂಥ ಮೂಢನಂಬಿಕೆಯನ್ನು ತುಂಟತನದಿಂದ ಗೇಲಿ ಮಾಡಲು ಯಾವುದಾದರೂ ನೆಪದಿಂದ ಚಂದ್ರನನ್ನು ನೋಡುವಂತೆ ಮಾಡುವ ಉಪಾಯವನ್ನು ಕೆಲವು ಹುಡುಗರು ಮಾಡುತ್ತಾರೆ. ಆದರೂ ಚೌತಿಚಂದ್ರನನ್ನು ನೋಡಿದ ದೋಷ ಮುಂದಿನ ಬಿದಿಗೆಯ ಚಂದ್ರನನ್ನು ನೋಡಿದರೆ ಪರಿಹಾರವಾಗುತ್ತದೆ ಎಂದು ನಂಬುವ ಹುಡುಗರುಂಟು.

ಹಲವು ಪುರಾಣ ಕಥೆಗಳ ಪ್ರಚಾರವು ಹರಕೆಯ ಸಂಪ್ರದಾಯದ ಪ್ರಸಾರಕ್ಕೆ ಕಾರಣವಾಗಿರುತ್ತದೆ. ಪರೀಕ್ಷೆಗಳಲ್ಲಿ ತಾನು ತೇರ್ಗಡೆ ಹೊಂದಿದರೆ ಸತ್ಯನಾರಾಯಣ ಪೂಜೆ ಮಾಡಿಸುತ್ತೇನೆ, ರೋಗ ವಾಸಿಯಾದರೆ ಇಂಥಿಂಥ ಹರಕೆ ಹೇಳಿಕೊಳ್ಳುತ್ತೇನೆ. ಅದನ್ನು ಪೂರೈಸುತ್ತೇನೆ ಮುಂತಾಗಿ ಹುಡುಗರು ಹೇಳಿಕೊಳ್ಳುವುದುಂಟು. ಹರಕೆಯನ್ನು ಪೂರೈಸದಿದ್ದರೆ ಕೇಡು ಎಂಬ ಭಾವನೆ ಸಾರ್ವತ್ರಿಕವಾಗಿರುತ್ತದೆ "ಕಟ್ಟಾಯದ ಭಾಷೆಯ ಸುದಿ ಕೆಟ್ಟುದು" ಎಂದು ಒಂದು ಶಾಸನದಲ್ಲಿ ನಮೂದಿಸಿದೆ.

೧೩. ಹಾಸ್ಯ ದೃಷ್ಟಿಯಿಂದ ಪ್ರಚಾರಗೊಳಿಸಿದ ಮೂಢನಂಬಿಕೆಗಳು

ಜನರು ತಾವು ಕೆಲವು ವಿಷಯ ಸ್ವತಃ ನಂಬದಿದ್ದರೂ ಹಾಸ್ಯದೃಷ್ಟಿಯಿಂದ ಮಕ್ಕಳಿಗೆ ಕೆಲವು ಮೂಢನಂಬಿಕೆಗಳನ್ನು ಕಲಿಸಿಬಿಡುತ್ತಾರೆ. ಅವುಗಳಲ್ಲಿ ಎಮ್ಮೆಯ ಹಾಲನ್ನು ಕುಡಿದವರು ಧಡ್ಡರಾಗುತ್ತಾರೆ ಎಂದು ಹೇಳುವುದೂ ಒಂದು ಸೇರುತ್ತದೆ. ಆಕಳಿಗೆ ಹೋಲಿಸಿದರೆ ಎಮ್ಮೆ ಸಾವಕಾಶ ನಡಿಗೆಯದು. ಅಷ್ಟು ಚುರುಕು ಪ್ರಾಣಿಯಲ್ಲ. ಅದರ ಹಾಲು (ನೀರು ಸೇರಿಸದಿದ್ದರೆ) ದಪ್ಪ. ಎಮ್ಮೆಯ ಹಾಲನ್ನು ಕುಡಿದ ಹುಡುಗನು ಮಂದ ಬುದ್ಧಿಯವನಾಗುತ್ತಾನೆ ಎಂದು ಹಾಸ್ಯ ಮಾಡುವುದುಂಟು. ಹೆಡ್ಡನಿಗೆ "ಎಮ್ಮೆ ತಮ್ಮಣ್ಣ" ಎಂದು ಹೇಳುತ್ತಾರಷ್ಟೇ ? ಕೋಣ ಮರಿ ಎಂಬುದರ ಸಾಕುಮಾರ್ಯದ ನುಡಿ ಅದು. ಎಮ್ಮೆಯ ಹಾಲನ್ನು ಕುಡಿದುದರಿಂದ ಯಾರೂ ಹೆಡ್ಡರಾಗಲಿಕ್ಕಿಲ್ಲ ಎಂದೆನಿಸುತ್ತದೆ.

ಊಟ ಮಾಡುವಾಗ, ವಿಶೇಷವಾಗಿ ಚಿಕ್ಕಮಕ್ಕಳು ಉಣ್ಣುವಾಗ ಬಾಳೆಎಲೆ ಆಚೀಚೆ ಸರಿದಾಡುತ್ತದೆ. ಆಗ "ಬಾಳೆ ಓಡಾಡುತ್ತದೆ; ನಾಳೆ ಪಾಯಸದ ಊಟ ಇದೆ" ಎನ್ನುತ್ತಾರೆ. "ಹಲಸಿನ ಹಣ್ಣನ್ನು ತಿಂದು ತಲೆಗೆ ಕೈಉಜ್ಜಿಕೊಂಡರೆ ನಾಳೆಗೂ ಸಿಗುತ್ತದೆ" ಎಂದು ಹೇಳಿ. ಹುಡುಗರು ಹಾಗೆ ಉಜ್ಜಿಕೊಂಡರೆ ನಗೆಯಾಡುತ್ತಾರೆ.

ಗೌರಿ ಹಬ್ಬದಲ್ಲಿ ಮಧ್ಯಾಹ್ನ ಒಂದೇ ಊಟ. ರಾತ್ರಿ ಊಟವಿಲ್ಲ. ಆ ಮಧ್ಯಾಹ್ನದ ಊಟ ನೈವೇದ್ಯ ಮುಗಿದ ಮೇಲೆ ತಡವಾಗಿಯೇ ಆಗುವದುಂಟು. ಆ ಹಬ್ಬದಲ್ಲಿ "ಹೊಟ್ಟೆ ತುಂಬ ಊಟ ಮಾಡು; ಇಲ್ಲದಿದ್ದರೆ ಇಡೀ ವರ್ಷ ಹೊಟ್ಟೆತುಂಬ ಊಟ ಸಿಗುವದಿಲ್ಲ" ಎನ್ನುತ್ತಾರೆ. ಸಂಜೆ ಹಸಿವೆ ಯಾಗಿ. ಊಟ ಹಾಕು ಎನ್ನುವ ಸಂದರ್ಭವನ್ನು ತಪ್ಪಿಸುವುದೇ ಇದರ ಉದ್ದೇಶ.

ಊಟಮಾಡಿದ ಮೇಲೆ ಹೊಟ್ಟೆ ತಿಕ್ಕಿಕೊಳ್ಳುವುದು ಕೆಲ ವರ ಅಭ್ಯಾಸವಾಗಿರುತ್ತದೆ. ಅವರಲ್ಲೂ ಗಡದ್ದಾಗಿ ಕಜ್ಜಾಯ ಊಟಮಾಡಿದ ಮೇಲೆ. "ಮಾಂಗನ್ನು ನೋಡುವ" ಹೊಟ್ಟೆಯ ಮೇಲೆ. (ಹೊಟ್ಟೆ ಉಬ್ಬಿದಾಗ) ಹೊಟ್ಟೆಯ ಮೇಲೆ ಕೈಯಾಡಿ ಸುವ ರೂಢಿ ಹೆಚ್ಚಾಗಿದೆ. ವಿಶೇಷವಾಗಿ. ದೊಡ್ಡ ಹೊಟ್ಟೆ ಯಿರುವವರಿಗೆ. (ಅಧಿಕಾರಿಗಳು. ರಾಜಕೀಯ ಪುಢಾರಿಗಳು. ಶೇಟಜಿ ಮುಂತಾದ ವರ್ತಕರು. ಭಟ್ಟರು ಇಂಥವರಿಗೆ, ಇರುವ ಒಳ್ಳೆಯ ಅಭ್ಯಾಸ. ಆದರೆ. ಮಕ್ಕಳು ಹಾಗೆ ಮಾಡಿಕೊಂಡರೆ ಉಂಡ ಹೊಟ್ಟೆಯ ಮೇಲೆ ಕೈಯಾಡಿಸಿದರೆ ಹೊಟ್ಟೆ ದೊಡ್ಡ ದಾಗುತ್ತದೆ ಎಂದು ಕುಚೋದ್ಯದಿಂದ ಹೇಳುತ್ತಾರೆ.

ಹೆಂಡತಿ ಗರ್ಭಿಣಿಯಾಗಿದ್ದಾಗ. ಗಂಡನು ಪ್ರಾಣಿಗಳನ್ನು ಕೊಲ್ಲಬಾರದು ಬೇಟೆಗೆ ಹೋಗಬಾರದು; ಬಾಳೆಯ ಸುಳಿಯನ್ನು ಕತ್ತರಿಸಬಾರದು. ಕೂದಲು ಕತ್ತರಿಸಿಕೊಳ್ಳದೆ. ತಲೆಗೂದಲು. ಮೀಸೆ ಗಡ್ಡ ಹಾಗೇ ಬೆಳೆಯಲು ಬಿಡಬೇಕು ಇತ್ಯಾದಿ ನಂಬಿಕೆ ಗಳನ್ನು ಹೆಂಡತಿಯ ಹೊಟ್ಟೆಯಲ್ಲಿದ್ದ ಶಿಶುವಿನ ಕ್ಷೇಮಪಾಲನೆಯ

ದೃಷ್ಟಿಯ ಮೂಢನಂಬಿಕೆಯನ್ನು ಪಾಲಿಸುತ್ತಿದ್ದರು. ಆದರೆ, ಚಿಕ್ಕಮಕ್ಕಳು ಕೂದಲನ್ನು ಬೆಳೆಯಗೊಟ್ಟರೆ, ನಿನ್ನ ಹೆಂಡತಿ ಎಷ್ಟು ತಿಂಗಳ ಬಸುರಿ ? ಎಂದು ಈಗಲೂ ಕೇಳುವುದುಂಟು. ಆದರೆ, ಹಿಪ್ಪಿ ಕೂದಲು ಬಿಟ್ಟಿರುವ ಫ್ಯಾಶನ್ ತರುಣರ ಹತ್ತಿರ ಇದೇ ಪ್ರಶ್ನೆ ಕೇಳಲು ಹಳ್ಳಿಗರು ಹಿಂಜರಿಯುತ್ತಾರೆ.

ಬೆಳ್ಳಕ್ಕಿಯನ್ನು ಕಂಡರೆ ತೆಂಗಿನ ಮರನೋಡಬೇಕು ಎಂದು ಒಬ್ಬ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗೆ ಯಾರೋ ಹೇಳಿದ್ದರು. ಇದಕ್ಕೆ ಸಾರ್ವತ್ರಿಕವಾದ ಅಥವಾ, ಹೆಚ್ಚು ಜನರ ನಂಬಿಕೆ ಎಂದು ಹೇಳಲು ಕಾರಣ ಕಾಣುವುದಿಲ್ಲ. ದಾರಿಯ ಮೇಲೆ ನಾನು ನನ್ನ ತಮ್ಮ ಚಿ। ದೇವರು ಸಂಗಡ ಚಿಕ್ಕಂದಿನಲ್ಲಿ ಹೋಗುತ್ತಿರುವಾಗ, ಮಾರ್ಗದ ಎರಡೂ ಕಡೆಗಳಲ್ಲಿ ಅಲ್ಲಲ್ಲಿ ನೆಟ್ಟಿರುವ ಬಾಂದುಕಲ್ಲುಗಳನ್ನು ತೋರಿಸಿ. ಇಲ್ಲೊಂದು ದೇವರು ಅದೆ, ಅದಕ್ಕೆ ನಮಸ್ಕಾರ ಮಾಡು ಎಂದು ಹೇಳಿ ನಮಸ್ಕಾರ ಮಾಡಿಸುತ್ತ ನಡೆದಿದ್ದೆನು. ಇದು ಹಾಸ್ಯ ದೃಷ್ಟಿಯಿಂದ ಮಸ್ಕರಿ (ತುಂಟತನ) ಯಿಂದ ನಾನು ಹೇಳಿದುದಾಗಿತ್ತು. ಬೆಳ್ಳಕ್ಕಿ ಕಂಡರೆ ತೆಂಗಿನ ಮರ ನೋಡಬೇಕು; ಅದಕ್ಕೆ ನಮಸ್ಕರಿಸಬೇಕು ಎಂಬುದೂ ಇಂಥ ತುಂಟತನದ ಮಾತಾಗಿ ಕಾಣುತ್ತದೆ.

ಗಂಡು ಹುಡುಗರ ತಲೆಯ ಕೂದಲಿನಲ್ಲಿ ಎರಡು ಸುರುಳಿ ಇದ್ದರೆ ಇಬ್ಬರು ಹೆಂಡಿರಾಗುತ್ತಾರೆ ಎಂಬ ನಂಬಿಕೆಯೂ ಹಾಸ್ಯ ಮಾಡಲು ಹೇಳುವುದಾಗಿರಬಹುದು.

"ರಾತ್ರ್ಯಾಗ ಗಂಡಮಕ್ಕಳ ಸುಣ್ಣದ ಚಟಗ್ಯಾಗ ಕೈಹಾಕಿದರ ಬರೇ ಹೆಣ್ಣಮಕ್ಕಳ ಹುಟ್ಟತಾವ" ಎಂಬುದು ಹಾಸ್ಯ ದೃಷ್ಟಿಯಿಂದ ಇಂಥ ಕೆಲಸ ನಿಷೇಧಿಸಲು ಹೇಳುವ ಮಾತು.

೧೪. ಪರಿಸಮಾಪ್ತಿ :

ಇತ್ತೀಚಿನ ವರ್ಷಗಳಲ್ಲಿ ಹೆಚ್ಚು ಹೆಚ್ಚು ಜನರು ಶಿಕ್ಷಣವನ್ನು ಪಡೆಯುತ್ತಿದ್ದಾರೆ. ಜ್ಞಾನಪ್ರಸಾರದ ಸಾಧನಗಳು ಹೆಚ್ಚಾಗಿವೆ. ಹಲವರು ದೊಡ್ಡವರಾದಂತೆ ಹಲವು ಮೂಢನಂಬಿಕೆಗಳನ್ನು ಕಳೆದುಕೊಳ್ಳುತ್ತಾರೆ. ಎಷ್ಟೋ ಸಲ ಅನುಭವವು ಅನೇಕ ಮೂಢನಂಬಿಕೆಗಳು ನಿರಾಧಾರವಾದವು ಎಂಬುದನ್ನು ಮನದಟ್ಟು ಮಾಡಿಕೊಡುತ್ತದೆ. ಕತ್ತಿಯಿಂದ ಗಾಯವಾದರೆ, ಗಾಯಕ್ಕೆ ಚಿಕಿತ್ಸೆ ಮಾಡದೆ, ಹಿಂದಿನ ಕೆಲವು ಕಡೆಗಳ ಜನರಂತೆ ಯಾರೂ ಕತ್ತಿಗೆ ಲೇಪನ ಹಚ್ಚುವುದಿಲ್ಲ.

ಜೋಡು ಬಾಳೆಹಣ್ಣುಗಳನ್ನೂ ಜೋಡು ವೀಳ್ಯದೆಲೆಗಳನ್ನೂ ತಿಂದರೆ ಜೋಡುಮಕ್ಕಳಾಗುವರೆಂದು ಈಗ ಯಾರೂ ನಂಬುವುದಿಲ್ಲ. ಹೀಗಿದ್ದರೂ ಹುಡುಗಿಯರು, ಇವನ್ನು ತಿಂದರೆ ಯಾರಾದರೂ ಹೀಗೆ ಹಾಸ್ಯಮಾಡುವರೆಂದು ಅವನ್ನು ತಿನ್ನದಿರಬಹುದು.

ಬೆಳಗು ಮುಂಜಾನೆ ಗಿಡಗಳ ಎಲೆಗಳ ಮೇಲೆ ಸಿಂಬಳದಂಥ ವಸ್ತು ಬಿದ್ದಿರುವುದು ಕಾಣುತ್ತದೆ. ನಾವು ಚಿಕ್ಕವರಾಗಿದ್ದಾಗ ಅದು ಸೂರ್ಯನ ಎಂಜಲು ಎಂದು ನಮಗಿಂತ ದೊಡ್ಡ ಹುಡುಗರು ಹೇಳುತ್ತಿದ್ದರು. ಸರ್ಪದ ಎಂಜಲು ಎಂದೂ ಹೇಳುತ್ತಿದ್ದುದುಂಟು. ಈಗ ಯಾರಾದರೂ ಒಂದು ವೇಳೆ ಆ ತರದ ಮಾತನ್ನು ಹೇಳುತ್ತಿದ್ದರೂ ಅದನ್ನು ನಂಬಿ ಹೇಳುತ್ತಿಲ್ಲ.

ಸೂರ್ಯ ಮುಳುಗಿದ ಎಂದು ಹೇಳುವ ರೂಢಿಯಿದ್ದಂತೆ ಈಗಲೂ ಹೇಳುತ್ತಾರೆ. ಆದರೆ, ಮೂರುನಾಲ್ಕು ವರ್ಷದ ನನ್ನ ಮೊಮ್ಮಗನಿಗೆ ಹೀಗೆ ಹೇಳಿದಾಗ ಅವನು ಸೂರ್ಯ ಮುಳುಗಲಿಲ್ಲ; ಬೇರೆ ದೇಶಕ್ಕೆ ಹೋದ ಎಂದನು.

ಈಗಿನ ಚಿಕ್ಕ ಮಕ್ಕಳೂ ಹಿಂದಿನ ಮಕ್ಕಳಿಗಿಂತಲೂ ಹೆಚ್ಚು ಜಾಣರಾಗಿರುವಂತೆ ಕಾಣುತ್ತದೆ. ಕಿವಿ-ನೆತ್ತಿಗೆ ಎಣ್ಣೆ ಹಾಕಿಕೊಳ್ಳ ದಿದ್ದರೆ ಕಣ್ಣು ಕುರುಡಾಗುತ್ತದೆ ಎಂದು ಸ್ವತಃ ಕುರುಡಿಯಂತಾದ ಒಬ್ಬ ಅಜ್ಜಿ ಹೇಳಿದಾಗ ಚಿಕ್ಕವನಾಗಿದ್ದ ನನ್ನ ಮಗನು 'ಹಾಗಾದರೆ ನೀನು ಕಿವಿ-ನೆತ್ತಿಗೆ ಎಣ್ಣೆ ಹಾಕಿಕೋ' ಎಂದು ಅವಳಿಗೆ ಉತ್ತರ ಕೊಟ್ಟನು.

ಬಾವಿಯ ನೀರಿನ ಎಂಜಿನ್ ಚಾಲೂ ಮಾಡಿದಾಗ, ಆ ಚೆಲ್ಲುವ ನೀರಿಗೆ ಕೈಯೊಡ್ಡಿದ ನನ್ನ ಮೊಮ್ಮಗನಿಗೆ 'ನೀರು ಕಲೆಯಬೇಡ; ನೀನು ನೀರು ಕಲೆದರೆ ನಿನ್ನ ಅಜ್ಜಿಗೆ ಥಂಡಿಯಾಗು ತ್ತದೆ' ಎಂದೆನು. ಆಗ ಕೂಡಲೇ ಅವನು, "ನಾನು ನೀರು ಕಲೆದರೆ ಅಜ್ಜಿಗೇಕೆ ಥಂಡಿಯಾಗಬೇಕು ? ಎಂದು ನನಗೇ ಪ್ರಶ್ನೆ ಮಾಡಿದನು.

ರಾಹು-ಕೇತು ಸೂರ್ಯ ಚಂದ್ರರನ್ನು ನುಂಗುವುದನ್ನು ಬಹಳ ಹುಡುಗರು ನಂಬುವದಿಲ್ಲ.

ಬಾಳೆ ಹಣ್ಣು ತಿಂದರೆ ಕೋಡು ಮೂಡುವ ಕಥೆಯನ್ನು ಕೇಳಿದ ಈಗಿನ ಚಿಕ್ಕಮಕ್ಕಳೂ ಖುಷಿಪಡುತ್ತಾರೆ. ಆದರೆ, ಕುಶಾಗ್ರಮತಿಗಳಾದ ಬಾಲಕರು, ಇಂಥ ಘಟನೆಯನ್ನು ಅಕ್ಷರಶಃ

ನಂಬುವುದಿಲ್ಲ: ಅವಾಸ್ತವಿಕವಾದ ಜನಪದ ಕಥೆಗಳನ್ನು ಹುಡುಗರಿಗೆ ಹೇಳುವಾಗ ಅದು ವಾಸ್ತವಭಾವನೆ. ಅವಾಸ್ತವ ಘಟನೆಗಳನ್ನೊಳಗೊಂಡಿರುತ್ತವೆ ಎಂಬುದನ್ನು ಅವರ ಮನಸ್ಸಿಗೆ ಬಿಂಬಿಸಿ ಕಥೆ ಹೇಳುವುದು ಸಮಂಜಸವಾದ ಕ್ರಮ. ನಾವು ನಂಬುವ ಎಷ್ಟೋ ಸಂಗತಿಗಳು ವೈಜ್ಞಾನಿಕವಾಗಿ ಸತ್ಯವಾಗಿರುವದಿಲ್ಲ. ಗುಂಗಾಡು ಬಾಯಿಂದ ಗಾನ ಮಾಡುವಂತೆ ಸ್ವರ ತೆಗೆಯುತ್ತದೆ ಎಂದು ನಂಬಿರುತ್ತೇವೆ. ಗುಂಗಾಡನ್ನು ಅಪ್ಸರೆಗೆ ಹೋಲಿಸಿ ಅದರ ಮಧುರ ಸ್ವರವನ್ನು ಕವಿಗಳು ಬಣ್ಣಿಸುತ್ತಾರೆ– ಶ್ರೀ ಚೆನ್ನವೀರ ಕಣವಿಯವರು ಬರೆದಂತೆ 'ನಾರದರವತರಿಸಿದಂತೆ. ನಾರದರು ತನ್ನ ವೀಣೆಯಿಂದ ನಾದವನ್ನು ಹೊಮ್ಮಿಸುವಂತೆ ಕೊಲ್ಲದಿದ್ದರೆ ನಾರದ, ಕೊಂದರೆ ನಾರುವ. ಈ ಮುಷಿ (ತಪ್ಪಿದೆ. ನುಸಿ–ನಮ್ಮ ಜಿಲ್ಲೆಯಲ್ಲಿ ಇದಕ್ಕೆ ನುಸಿ ಎಂದೇ ಹೇಳುತ್ತಾರೆ. ಚಾದರದಲ್ಲೂ ಸೀರೆಯಲ್ಲೂ ನುಸಿದು ತನ್ನ "ಚುಚ್ಚು ಮದ್ದನ್ನು" ನೀಡುವುದರಿಂದ ನುಸಿ ಎಂಬ ಹೆಸರು ಇದಕ್ಕೆ ಯೋಗ್ಯವಾದದ್ದು). ತನ್ನ ರೆಕ್ಕೆಗಳನ್ನು ಬಹುವೇಗವಾಗಿ ಚಲಾಯಿಸುವಂತೆ ಹಾರುವುದರಿಂದ ಏಳುವ ತರಂಗಗಳಿಂದ ಈ ನಾದ ಲಹರಿಯನ್ನು ಎಬ್ಬಿಸುತ್ತದೆ. ಈ ಅಂಶವನ್ನು ಶ್ರೀ ಎಸ್. ಡಿ. ಬಳೂರಗಿ ಅವರು ಯಲ್ಲಾಪುರ ಕಂಪಲಿಯಲ್ಲಿ ಕ. ವಿ. ವಿ. ಉಪನ್ಯಾಸದಲ್ಲಿ ತಿಳಿಸಿದ್ದರು.

ಕಣ್ಣು ಮಿಟುಕಿಸುವಂತೆ ಕಾಣುವ ತಾರೆಗಳ ಬೆಳಕು ನಿಜವಾಗಿ ಹಾಗಿಲ್ಲ ವಾತಾವರಣದಲ್ಲಿ ಹಾದು ಬರುವಾಗ ಹಾಗೆ ಕಾಣುತ್ತದೆ.

ಒಬ್ಬ ಶ್ರೀಮಂತನು ಬೇರೆ ಊರಿನಲ್ಲಿಯ ತನ್ನ ಹೊಲಕ್ಕೆ ಒಮ್ಮೆ ಹೋಗಿದ್ದನು. ಅಲ್ಲಿ ಅವನಿಗೆ ಅಲ್ಲಿನ ಮರ ಕಡಿಯಿಸಲು ಕೊಡಲಿಯ ಅವಶ್ಯಕತೆಯುಂಟಾಯಿತು. ಆಗ ಅವನು ಓದು ಬರೆಹ ಬಾರದ ಒಬ್ಬ ಹಳ್ಳಿಗನ ಹತ್ತಿರ ಒಂದು ಚಿಕ್ಕೆಯ ಮೇಲೆ ಇದ್ದಿಲಿನಿಂದ ಬರೆದು ಇಂಥಲ್ಲಿ ತನ್ನ ಮನೆಗೆ ಹೋಗಿ ತನ್ನ ಹೆಂಡತಿಗೆ ಆ ಚಿಕ್ಕೆ ತೋರಿಸಿ ಅವಳು ಕೊಟ್ಟ ಸಾಮಾನನ್ನು ತಂದುಕೊಡು ಎಂದು ಹೇಳಿ ಅದನ್ನು ಕೊಟ್ಟು ಕಳಿಸಿದನು. ಆತನ ಹೆಂಡತಿ ಆ ಬರೆಹ ಓದಿಕೊಂಡು ಕೊಡಲಿಯನ್ನು ಹಳ್ಳಿಗನ ಹತ್ತಿರ ಕೊಟ್ಟು ಅದನ್ನು ಶ್ರೀಮಂತನಿಗೆ ತಲ್ಪಿಸಲು ಹೇಳಿದಳು. ಹಳ್ಳಿಗನು ಆ ಚಿಕ್ಕೆ ಮಾತಾಡಿ ಶ್ರೀಮಂತನಿಗೆ ಬೇಕಾದ ವಸ್ತುವನ್ನು ಕಳಿಸಲು ಹೇಳಿತೆಂದು ತಿಳಿದನು. ಆದರೆ, ಕ್ಯಾಸೆಟ್‌ಗಳಿಂದ ಸ್ವರ ಮಾತಾಡಿದಂತೆ, ಹಾಡಿದಂತೆ ಹೊರಡುವ ಈ ಕಾಲದಲ್ಲಿ ಆ ಹಳ್ಳಿಗನ ಅಜ್ಞಾನಕ್ಕಾಗಿ ನಗುವುದು ಸಮಂಜಸವಲ್ಲವೆಂದು ಕಾಣುತ್ತದೆ.

ಇನ್ನೊಂದು ಉದಾಹರಣೆ. ಶ್ರೀ ವಿ. ಜಿ. ಭಟ್ಟರು ಬರೆದ ಘಟನೆ. ಹಳ್ಳಿಯಲ್ಲಿ ಹೊಸದಾಗಿ ಮೋಟಾರು ಬಂದಾಗ ಅದನ್ನು ನೋಡಿದ ಹಳ್ಳಿಗನು ಅದಕ್ಕೆ ಬಗ್ಗಿ ನಮಸ್ಕಾರ ಮಾಡಿದನು. ಅವನ ಭೋಳೆತನಕ್ಕೆ ನಕ್ಕ ಕವಿಗಳು ಮನೆಗೆ ಬಂದಾಗ ದೇವರ ಪೂಜೆಮಾಡಿದ ಅವರ ತಂದೆಯವರು ದೇವರ ಮೂರ್ತಿಗೆ ಉದ್ದಂಡ ನಮಸ್ಕಾರ ಮಾಡುವುದನ್ನು ನೋಡಿದರು. ಆಗ ಹಳ್ಳಿಯ ಪೆದ್ದನೆಂದು ತಿಳಿದು ನಕ್ಕ ಅವರ ಮನಸ್ಸು ಹಳ್ಳಿಗನ ನಡತೆಯ ಕುರಿತು ನಗುವ ಪ್ರವೃತ್ತಿಯನ್ನು ಹತ್ತಿಕ್ಕಿ ಗಂಭೀರವಾಯಿತು.

ತುಲಸಿಯು ಮುಂದೆ ನಿಂತು ತನಗೆ ಒಳ್ಳೆಯ ಗಂಡ ದೊರಕಲಿ ಎಂದು ಪ್ರಾರ್ಥಿಸುವಂತೆ ತಾಯಿ ಹೇಳಿದಂತೆ ಪುಟ್ಟ ಹುಡುಗಿ ಪ್ರಾರ್ಥಿಸುತ್ತಿದ್ದಳು. ಅವಳ ಆಸೆ ಫಲಿಸಿತು. ಇದರಲ್ಲಿ ಅಪಾಯದ ಹೆದರಿಕೆ ಇರಲಿಲ್ಲ. ಮಾನವನಲ್ಲಿ ಉದಾತ್ತ ಭಾವನೆಗಳನ್ನು ಉದ್ದೀಪನಗೊಳಿಸುವ ದೈವಭಕ್ತಿಯನ್ನು ಹೀಗಳೆಯದೆ ಕೆಡಕನ್ನುಂಟು ಮಾಡುವ ಮೂಢನಂಬಿಕೆಗಳನ್ನು ಅಲ್ಲಗಳೆಯುವುದು ಅಗತ್ಯವಾಗಿದೆ. ರೋಗ ಬಾಧೆಯಾದಾಗ ಯೋಗ್ಯ ರೀತಿಯಲ್ಲಿ ಔಷಧ-ಉಪಚಾರ ಚಿಕಿತ್ಸೆ ಮಾಡಿಸುವುದನ್ನು ಅಲಕ್ಷಿಸಿ, ನೋಟಗಾರರ-ಮಾಟಗಾರರ ಹತ್ತಿರ ಹೋಗಿ ಹಣವನ್ನು ಗುಣವಾಗುವ ಅವಕಾಶವನ್ನೂ ಕಳೆದುಕೊಳ್ಳುವ ಪ್ರಸಂಗಗಳನ್ನು ತಡೆವಂತೆ ಜನರಲ್ಲಿ ತಿಳಿವಳಿಕೆಯನ್ನು ಹರಡುವುದು ಅಗತ್ಯವಾದ ಕೆಲಸವಾಗಿದೆ. ಅಜೀರ್ಣದಿಂದ ಹೊಟ್ಟೆಯುಬ್ಬರವಾದರೆ, ಅದಕ್ಕೆ ಉಪವಾಸ ಮತ್ತು ಯೋಗ್ಯ ಜೀರ್ಣಕಾರಿಯಾದ ಆಹಾರ-ವಿಹಾರ ಮತ್ತು ಚಿಕಿತ್ಸೆಗಳನ್ನು ಅನುಸರಿಸಬೇಕು ಹೊರತು, ಭೂತ-ದೆವ್ವ, ಮಾಟ-ಮಂತ್ರ ಎಂದು ಮಬ್ಬಾಟಕ್ಕೆ ಬಲಿಯಾಗಬಾರದು.

ಗರುಡನು ಕೂಗುವಾಗ ಹೊಟ್ಟೆಯನ್ನು ತಿಕ್ಕಿಕೊಂಡರೆ ಜ್ವರಗಡ್ಡೆ ಕರಗುತ್ತದೆ, ಎಂಬ ಮೂಢನಂಬಿಕೆಯಿಂದ ಹೊಟ್ಟೆ ತಿಕ್ಕಿಕೊಂಡರೆ ಆ ಜ್ವರಗಡ್ಡೆ ಕರಗದೆ ಇನ್ನೂ ದೊಡ್ಡದಾಗಿ ಪ್ರಾಣಕ್ಕೆ ಕಂಟಕವಾದೀತು.

ನಕ್ಷತ್ರ ಬಿದ್ದುದನ್ನು, ಎಂದರೆ ಉಲ್ಕಾಪಾತವನ್ನು ಎಂಬ ಅರ್ಥದಲ್ಲಿ ನೋಡಿದರೆ ಅನಿಷ್ಟ; ಅದರ ನಿವಾರಣೆಗೆ ತೆಂಗಿನ

ಮರವನ್ನು ನೋಡಬೇಕು ಎಂಬ ನಂಬಿಕೆಯನ್ನು ಒಬ್ಬ ಹುಡುಗನು ಹೇಳಿದನು. ಉಲ್ಕಾಪಾತ ಮನೆಯ ಮೇಲೆ, ಮೈಮೇಲೆಯೇ ಬಿದ್ದರೆ ಅನಿಷ್ಟವೇ: ಆದರೆ, ಅದನ್ನು ನೋಡಿದ ಮಾತ್ರಕ್ಕೆ ಕೆಡಕೇನೂ ಇಲ್ಲ. ಹಾಗೆಯೇ ತೆಂಗಿನ ಮರವನ್ನು ನೋಡುವುದರಿಂದ ಅಪಾಯವೇನೂ ಇಲ್ಲವಾದರೂ ಈ ತರ್ಕವು ಸಮಂಜಸವಲ್ಲ ಎಂದು ಹುಡುಗರು ತಿಳಿಯಬೇಕಾದುದು ಅವಶ್ಯವಾಗಿದೆ.

ಅಷ್ಟಗ್ರಹ ಯುತಿಯೂ ಹ್ಯಾಲಿಯಂಥ ಧೂಮಕೇತುವಿನ ಆಗಮನವೂ ನಿಸರ್ಗವ್ಯಾಪಾರಗಳೇ ಅವರೂ ನೈಸರ್ಗಿಕವಾದ ಹಲವು ಉತ್ಪಾತಗಳಿಗೆ. ಅತಿವೃಷ್ಟಿ, ಅನಾವೃಷ್ಟಿ, ಭೂಕಂಪ ಜ್ವಾಲಾಮುಖಿಗಳ ವಿಚಿತ್ರ ಅಪಘಾತಗಳ ಹೆಚ್ಚಳ ಇವುಗಳಿಗೆ ಇವನ್ನೇ ಕಾರಣಗಳೆಂದು ತಿಳಿಯುವುದು ಸಮಂಜಸವಾದುದಲ್ಲ. ಒಂದು ವೇಳೆ ಇವುಗಳಿಂದ ಏನಾದರೂ ನೈಸರ್ಗಿಕವಾದ ಸ್ಥಿತ್ಯಂತರಗಳು ಸಂಭವಿಸಬಹುದೆಂದು ತಿಳಿದುಕೊಂಡರೂ ಯಜ್ಞಯಾಗಾದಿಗಳಿಂದ ಹವೆಯಲ್ಲಿ ಕೆಲವು ಮಟ್ಟಿನ ಕ್ರಿಮಿನಾಶನವಾಗುವುದೆಂದು ಒಪ್ಪಿದರೂ ನೈಸರ್ಗಿಕ ಘಟನೆಗಳ ಮೇಲೆ ಇವುಗಳ ಪರಿಣಾಮವು ಅತ್ಯಲ್ಪವೆಂದೇ ಹೇಳಬೇಕಾಗುತ್ತದೆ. ತಮ್ಮ ಧಾರ್ಮಿಕ ಕರ್ತವ್ಯ ಕರ್ಮಗಳೆಂದು ಇವುಗಳನ್ನು ಆಚರಿಸುವ ಜನರಿಗೆ ನಾವು ಇವನ್ನು ನಡೆಯಿಸಬೇಡಿರೆಂದು ಹೇಳಲಾರೆವು.

ಶಂಖವನ್ನೂದುವುದರಿಂದ ಹವೆಯಲ್ಲಿನ ಕ್ರಿಮಿನಾಶನವಾಗುವುದಾದರೆ ಶಂಖಧ್ವನಿಯನ್ನು ಇತರರಿಗೆ ಉಪದ್ರವವಾಗ

ನಂತೆ ಧಾರ್ಮಿಕ ಕಾರ್ಯಗಳಲ್ಲಿಯೇ ಅಲ್ಲದೆ, ಬೇರೆ ಸಂದರ್ಭಗಳಲ್ಲಿಯೂ ಹೋರಾಡಿಸುವುದರಲ್ಲಿಯೂ ಯಾರದೇ ಆಕ್ಷೇಪವೂ ಇರಕೂಡದು.

ತರ್ಕಬದ್ಧವಲ್ಲದ (ಅಸಮಂಜಸ) ನಂಬಿಕೆಗಳನ್ನು ಕಳೆದು ಕೊಳ್ಳುವ ಸಂದರ್ಭದಲ್ಲಿ ಸಮಂಜಸವಾದ ನಂಬಿಕೆಗಳನ್ನು ಹೊಂದಿರುವುದು ಅದಕ್ಕಿಂತ ಹೆಚ್ಚು ಮಹತ್ವದ್ದಾಗಿದೆ ಎಂದು ಪ್ರಖ್ಯಾತ ಅಮೆರಿಕನ್ ಮನಶಾಸ್ತ್ರಜ್ಞರಾದ ಎರಿಕ್ ಫ್ರೋಮ್ ಅವರು ಬರೆದುದು ಯೋಗ್ಯವಾಗಿದೆ. ಸ್ವಾತಂತ್ರ್ಯ, ಸಮತೆ, ಸೋದರ ಭಾವಗಳ ತತ್ವಗಳಿಂದ ಶಾಶ್ವತವಾಗುವ ಸಾಮಾಜಿಕ ವ್ಯವಸ್ಥೆಯನ್ನು ಸ್ಥಾಪಿಸುವ ಮಾನವನ ಶಕ್ತಿಯಲ್ಲೂ ಬುದ್ಧಿಯಲ್ಲೂ ನಂಬಿಕೆಯಿಡುವುದು ಅಗತ್ಯವಾಗಿದೆ. ಹೆಚ್ಚು ಹೆಚ್ಚಾಗಿ ಸಂಗತಿ (focts) ಗಳನ್ನು ಸತ್ಯವನ್ನು ತಿಳಿಯುವಲ್ಲಿ ಪರಿಣಮಿಸುವುದೆಂಬ ನಂಬಿಕೆ ಮೂಢನಂಬಿಕೆಯಾಗಿದೆ ಎಂದು ಅವರು ಬರೆಯುತ್ತಾರೆ.

ಮಗುವು ಮೊದಲ ತನ್ನ ಹಿರಿಯರ ಎಲ್ಲ ವಿಚಾರಗಳನ್ನು ಪ್ರಶ್ನಿಸದೆ ಒಪ್ಪಿಕೊಳ್ಳುತ್ತದೆ. ಆ ಮೇಲೆ ಸ್ವತಂತ್ರ ವಿಚಾರ ಮಾಡಹತ್ತಿದಾಗ ಹಿರಿಯರ ನಂಬಿಕೆಗಳನ್ನು ವಿಮರ್ಶಿಸುವ ಬುದ್ಧಿಯಲ್ಲಿ ಹಿಂದಿನ ನಂಬಿಕೆಗಳನ್ನು ಸಂಶಯ ದೃಷ್ಟಿಯಿಂದ ನೋಡಲು ಬೆಳೆಯುತ್ತಿರುವ ಮನಸ್ಸು ಪ್ರಾರಂಭಿಸುತ್ತದೆ.

ಬಹುಸಂಖ್ಯಾಕರ ಅಥವಾ ಅಧಿಕಾರದಲ್ಲಿರುವವರು ಹೇಳುವರೆಂದು ವಿಚಾರಮಾಡದೆ ಒಪ್ಪಿಕೊಳ್ಳುವಲ್ಲಿ ಸಕಾರಣ

ಪಲ್ಲದ ನಂಬಿಕೆ ಬೆಳೆಯಲು ನಿಮಿತ್ತವಾಗುತ್ತದೆ. ಯಾರೋ ದೊಡ್ಡ ಮನುಷ್ಯರು ಧರ್ಮಗುರುಗಳೂ ಪ್ರವಾದಿಗಳೂ, ರಾಜಕೀಯ ಪ್ರಭಾರಿಗಳೂ ತಮ್ಮ ಮೇಲೆ ಬೀರುವ ಪ್ರಭಾವದ ಸಮ್ಮೋಹಿನಿ ಜಾಲದಲ್ಲಿ ಅವರು ಹೇಳಿದ್ದನ್ನೆಲ್ಲ ಪ್ರಶ್ನಾತೀತ ಸತ್ಯವೆಂದು ಒಪ್ಪಿಕೊಳ್ಳುವಲ್ಲಿ ಮೂಢನಂಬಿಕೆಗಳು ಬೆಳೆಯುತ್ತವೆ.

"ಮೂಢ ಪರಪ್ರತ್ಯಯನೇಯ ಬುದ್ಧಿ : ಇತರರ ಅಭಿಪ್ರಾಯವನ್ನು ವಿಮರ್ಶಿಸದೆ ಅವರಿಂದ ಎಳೆಯಲ್ಪಟ್ಟು. ಕಣ್ಣು ಮುಚ್ಚಿ ಅವರ ಸೂಚನೆ (suggestion) ಯನ್ನು ಒಪ್ಪುವ ಮನುಷ್ಯನನ್ನೇ ಮೂಢನೆಂದು ಕರೆದಿರುವುದು ಇಂಥ ಬುದ್ಧಿಯೇ ಮೂಢನಂಬಿಕೆಗಳ ಉಗಮದ ಮತ್ತು ಬೆಳವಣಿಗೆಯ ಮೂಲ.

ಅಪಾಯವನ್ನುಂಟುಮಾಡುವ ಮೌಢ್ಯವನ್ನು ಕಳೆದುಕೊಂಡ ಮಾನವನ ನಂಬಿಕೆಗಳು ನೆಲೆಗೊಳ್ಳಲಿ.

ಈ ಹೊತ್ತಿಗೆ ಬರೆಯಲು ಮಾಹಿತಿ ನೀಡಿದವರು

೧ ಕು. ವಿದ್ಯಾ ತಿಮ್ಮಣ್ಣ ಹೆಗಡೆ. ಹೆಗಡೆ ಊರು
೨ ಕು. ರವಿ ರಾಮಚಂದ್ರ ಗಾಂವಕರ, ಹೆಗಡೆ ಊರು
೩. ಶ್ರೀ ಎನ್. ಟಿ. ಹೆಗಡೆ, ಹೆಗಡೆ ಊರು
೪ ಸೌ॥ ಪರಮೇಶ್ವರಿ ನಾರಾಯಣ ಹೆಗಡೆ, ಹೆಗಡೆ ಊರು
೫ ಕು. ವೀಣಾ ತಿಮ್ಮಣ್ಣ ಹೆಗಡೆ, ಹೆಗಡೆ ಊರು
೬ ಕು. ಸವಿತಾ ಲಕ್ಷ್ಮೀನಾರಾಯಣ ಹೆಗಡೆ, ಹೆಗಡೆ ಊರು
(ಈಗ ಸೌ॥ ಸವಿತಾ ಶ್ರೀಪಾದ ಭಟ್ಟ, ಕಂಚಿಗದ್ದೆ)
೭ ಸೌ॥ ಅನಸೂಯಾ ಲಕ್ಷ್ಮೀನಾರಾಯಣ ಹೆಗಡೆ,
ಹೆಗಡೆ ಊರು
(ಈಗ ಕೈಲಾಸವಾಸಿ ಲೇಖಕನ ಧರ್ಮಪತ್ನಿ)
೮ ಸೌ॥ ರಾಧೆ ಕೋಂ ತಿಮ್ಮಣ್ಣ ಹೆಗಡೆ, ಹೆಗಡೆ ಊರು
೯ ಕರಿಯಮ್ಮ ಕೋಂ ರಾಮಕೃಷ್ಣ ಗೌಡ, ಹೆಗಡೆ ಊರು
೧೦ ಶ್ರೀ ಪಾಂಡುರಂಗ ಅನಂತ ಶ್ಯಾನಭಾಗ, ಹೆಗಡೆ ಊರು
೧೧. ಶ್ರೀ ಎ. ಡಿ. (ಅಪ್ಪು) ಶ್ಯಾನಭಾಗ, ಹೆಗಡೆ ಊರು
೧೨ ಶ್ರೀ ರಾಮಕೃಷ್ಣ ಲಕ್ಷ್ಮೀನಾರಾಯಣ ಹೆಗಡೆ, ಎಂ.ಎಸ್‌ಸಿ.
೧೩. ಕು. ಶಾಲಿನಿ ತಂದೆ ರಾಮಕೃಷ್ಣ ಹೆಗಡೆ
೧೪ ಚಿ॥ ಸೌ॥ ಶ್ಯಾಮಲಾ ಕೋಂ ರಾಮಕೃಷ್ಣ ಹೆಗಡೆ
(೧೨ ರಿಂದ ೧೪ರ ವರೆಗಿನವರು ಈಗ ಸಿದ್ದಾಪುರದಲ್ಲಿ
ಇರುವರು)
೧೫ ಶ್ರೀ ಗಣಪತಿ ವೆಂಕಟ್ರಮಣ ಪಂಡಿತ ಗುಡ್ಡಕಾಗಾಲ
೧೬ ಕು. ಜಾಹ್ನವಿ ಗಣಪತಿ ಪಂಡಿತ, ಗುಡ್ಡಕಾಗಾಲ
೧೭ ಕು. ನಿರಂಜನಾ ಗಣಪತಿ ಪಂಡಿತ, ಗುಡ್ಡಕಾಗಾಲ
೧೮ ಕು. ಶೈಲಾ ಗಣಪತಿ ಪಂಡಿತ, ಗುಡ್ಡಕಾಗಾಲ
೧೯ ಜನಾಬ ಮೊಹಮ್ಮದ ಮಿರಾನ ಸಾಬ್, ಕುಮಟಾ

೨೦ ಕು. ವಿಷ್ಣು ರಾಮಕೃಷ್ಣ ಭಟ್ಟ (ಕೆಕ್ಕಾರ ಈಗ ಮುಂಬಯಿ)

೨೧ ಕು. ಸತೀಶ ಶಿವರಾಮಭಟ್ಟ, ಉಳಗೆರೆ, ನೀಲಕೋಡು ಹೊನ್ನಾವರ

೨೨ ಕು. ಗಣೇಶ ಶಿವರಾಮ ಭಟ್ಟ, ಉಳಗೆರೆ, ನೀಲಕೋಡು, ಹೊನ್ನಾವರ

೨೩ ಶ್ರೀ ಗಜಾನನ ಗಣೇಶ ಭಟ್ಟ ಚಿತ್ರಿಗಿ (ಮರಸೆಭಟ್) ಬಟ್ರ್ಯೋಡಿ, ಭಟಕಳ.

೨೪ ಕು. ಸುಷಮಾ ಕೆ. ಹೆಗಡೆ, ಬಿಳಿಗಲ್‌ಮನೆ, ತಾ. ಸಿರ್ಸಿ

೨೫ ಕು. ಬಂಗಾರೇಶ್ವರ ನಾಗ ಗೌಡ, ಕಳವೆ, ತಾ. ಸಿರ್ಸಿ

೨೬ ಕು. ಶ್ರೀಧರ ನಾರಾಯಣ ಭಟ್ಟ, ಅಜವೆ

೨೭ ಕು. ಶಂಕರ ಸುಬ್ರಾಯ ನಾಯ್ಕ ಕಲ್‌ಕಟ್ಟೆ

೨೮ ಕು. ಸುರೇಶ ಕೆ. ಭಟ್ಟ, ಕಂಚಿಕೊಪ್ಪ

೨೯ ಕು. ಸುರೇಖಾ ಗೋಪಾಲಕೃಷ್ಣ ಹೆಗಡೆ, ಹೊಡ್ಲಮನೆ

೩೦ ಕು. ಗೋವಿಂದ ಶಿವರಾಮ ಭಟ್ಟ, ಅಜವೆ

೩೧ ಕು. ಶ್ಯಾಮಸುಂದರ ವಿರೂಪಾಕ್ಷ ಹೆಗಡೆ, ಸಿರ್ಸಿ

೩೨ ಕು. ಶ್ರೀಪಾದ ವೆಂಕಟ್ರಮಣ ಭಟ್ಟ
(೨೩ ರಿಂದ ೩೧ ವರೆಗಿನವರು ಸಿರ್ಸಿ ತಾಲೂಕಿನ ನೀರ್ನ ಹಳ್ಳಿಯ ಮಾಧ್ಯಮಿಕ ಶಾಲೆಯ ವಿದ್ಯಾರ್ಥಿಗಳು, ಮುಖ್ಯಾಧ್ಯಾಪಕರು

೩೩ ಶ್ರೀ ರಾಮಚಂದ್ರ ನಾರಾಯಣ ಭಟ್ಟ ಕಂಚಿಗದ್ದೆ.ತ. ಸಿರ್ಸಿ.

೩೪ ಶ್ರೀ ಅರುಣ ಆನಂದ ಗೌಡ, ಬಂದಿಸಾರ, ತಾ.ಸಿದ್ದಾಪುರ

೩೫ ಸೌ. ಮನೋರಮಾ ರಾಮಕೃಷ್ಣ ಹೆಗಡೆ ಹಾರ್ಸಿಕಟ್ಟೆ ಸಾ. ಸಿದ್ದಾಪುರ

೩೬ ಕು. ಅರ್ಚನಾ ಮಾಹಿತಿ ಹೇಳಿದ್ದು ಇತರ ವಿವರ ಬರೆದು ಕೊಳ್ಳದೆ ತಿಳಿದಿಲ್ಲ.

ಉಪನ್ಯಾಸ ಗ್ರಂಥಮಾಲೆಯ ಕೆಲವು ಪ್ರಕಟನೆಗಳು

೧ ಮಾನಸಿಕ ಆರೋಗ್ಯ

—ಎ. ಎಸ್. ಧರಣೇಂದ್ರಯ್ಯ

೨ ಮಕ್ಕಳ ಮಾರಕ ರೋಗಗಳು ಹಾಗೂ ಪ್ರತಿಬಂಧಕ ಉಪಾಯಗಳು

—ಆರ್. ಸಿ. ಅಂಗಡಿ

೩ ಪ್ರೌಢರ ಜಗತ್ತಿನಲ್ಲಿ ಮಕ್ಕಳು

—ಕೆ. ಜಿ. ಗುರುಮೂರ್ತಿ

೪ ಅನಿಷ್ಟ ಪದ್ಧತಿಗಳ ನಿರ್ಮೂಲನೆ

—ಎಂ. ಬಿ. ಪಾಟೀಲ

೫ ಮದುವೆ ಮತ್ತು ಮಹಿಮೆ

—ನೀಲಮ್ಮ ಕತ್ನಳ್ಳಿ

೬ ಮಾನಸಿಕ ಆರೋಗ್ಯ

—ಎ. ಎಸ್. ಧರಣೇಂದ್ರಯ್ಯ

೭ ಕನ್ನಡ ಕೊಂಕಣಿ ಜನಪದ ಸಾಹಿತ್ಯ

—ಎಲ್. ವಿ. ಪೈ

೮ ಭಾರತೀಯ ಹಬ್ಬಗಳು

—ಸಿ. ವ್ಹಿ. ಕೆರಿಮನಿ

೯ ವ್ಯಾವಹಾರಿಕ ಮಾನವಶಾಸ್ತ್ರ

—ಕೆ. ಜಿ. ಗುರುಮೂರ್ತಿ

ಪ್ರಸಾರಾಂಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ